ಅಚಲ

20

ದ್ವೈಮಾಸಿಕ, ಜನವರಿ 8, 1994



ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನೈದು ರೂಪಾಯಿಗಳನ್ನು ಎಂ. ಓ/ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚೆಕ್ ಮೂಲಕ ಹಣ ಕಳಿಸುವವರು 20/ರೂ. ಗಳಿಗೆ ಕಳಿಸಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಸಂಪಾದಕ ಮಂಡಳಿ :

ಎನ್. ಗಾಯಿತ್ರಿ, ನೇಮಿಚಂದ್ರ, ದೇವಿ
ಡಾ॥ ಬಿ. ಎನ್. ಸುಮಿತ್ರಾಬಾಯಿ

ಚಂದಾ ವಿವರ :

ವಾರ್ಷಿಕ ಚಂದಾ	:	ರೂ. 15–00
ಆಜೀವ ಚಂದಾ	:	ರೂ. 150–00
ಚೆಕ್ ಮೂಲಕ	:	ರೂ. 160–00
ಸಂಸ್ಥೆಗಳಿಗೆ	:	ರೂ. 200–00
ಬಿಡಿ ಪ್ರತಿ	:	ರೂ. 2–00
ವಿಶೇಷ ಪ್ರತಿ	:	ರೂ. 3–50

Printed at Janashakthi Printers
5th Main Road, Gandhinagar
BANGALORE-560 009

Published by, Dr. G. Ramakrishna
on behalf of Jagruthi Mahila Adhyayana
Kendra, 261, I Main Road, Vyalikaval
BANGALORE - 560 003

Editor : N. Gayathri

ಪ್ರಿಯ ಚಂದಾದಾರರೇ,

ಚಂದಾ ನವೀಕರಿಸಿ, ನಿಮ್ಮ ಸ್ನೇಹವಲಯಕ್ಕೂ "ಅಚಲ" ಪರಿಚಯಿಸಿ. ಎಂ. ಓ. ಮೂಲಕ ಚಂದಾದಾರರಾಗುವವರಲ್ಲಿ ವಿಶೇಷ ವಿನಂತಿ. ಎಂ. ಓ. ಫಾರಂನಲ್ಲಿ ತಪ್ಪದೆ ನಿಮ್ಮ ವಿಳಾಸ ಬರೆಯಿರಿ. ಹೀಗೆ ವಿಳಾಸ ಬರೆಯದೆ, ಹಣ ಸಂದಾಯ ಮಾಡುವ ಪ್ರಕರಣಗಳು ಈಗ ಹೆಚ್ಚುತ್ತಿವೆ. ದಯವಿಟ್ಟು ಮರೆಯದೆ ನಿಮ್ಮ ವಿಳಾಸ ಬರೆಯಿರಿ.

ಲೇಖನ, ಹಣ ಕಳುಹಿಸಬೇಕಾದ ವಿಳಾಸ :

ಎನ್. ಗಾಯಿತ್ರಿ
ಬಿ–30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
9ನೇ ಕ್ರಾಸ್, ಒಂದನೆ ಮೇನ್, ವಿಜಯನಗರ
2ನೇ ಹಂತ, ಬೆಂಗಳೂರು–560 040

ಅಭಿನಂದನೆಗಳು

ಖ್ಯಾತ ಲೇಖಕಿ ಎಂ. ಕೆ. ಇಂದಿರಾರವರ ಪ್ರಖ್ಯಾತ ಕಾದಂಬರಿ 'ಫಣಿಯಮ್ಮ'ದ ಇಂಗ್ಲೀಷ್ ಭಾಷಾಂತರಕ್ಕೆ ಶ್ರೀಮತಿ ತೇಜಸ್ವಿನಿ ನಿರಂಜನರವರಿಗೆ ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಅವರಿಗೆ ಅಚಲದ ಅಭಿನಂದನೆಗಳು.

* * *

ಖ್ಯಾತ ತಮಿಳು ಲೇಖಕಿ ರಾಜಂ ಕೃಷ್ಣನ್‌ರವರ ಸಣ್ಣ ಕಥಾಸಂಕಲನ 'ಅವಳ್' ಕೃತಿಗೆ 1993ರ ಪ್ರತಿಷ್ಠಿತ ತಿರುಮಲಾಂಬ ಪ್ರಶಸ್ತಿ ದೊರೆತಿದೆ. ಬೆಂಗಳೂರಿನ ಶಾಶ್ವತಿ ಮಹಿಳಾ ಅಧ್ಯಯನ ಕೇಂದ್ರವು ನೀಡುವ ನಂಜನಗೂಡು ತಿರುಮಲಾಂಬರವರ ಹೆಸರಿನ ರಾಷ್ಟ್ರಪ್ರಶಸ್ತಿ ಇದು. ಅವರಿಗೆ ಅಚಲದ ಅಭಿನಂದನೆಗಳು.

ಸಂಪಾದಕೀಯ

ಪ್ರಿಯ ಸಂಗಾತಿಗಳಿಗೆಲ್ಲಾ ಹೊಸ ವರ್ಷದ ಶುಭಾಶಯಗಳು

ಈ ಸಂಚಿಕೆಯೊಂದಿಗೆ ಅಚಲ ತನ್ನ ಒಂಭತ್ತನೆಯ ವರ್ಷವನ್ನು ಯಶಸ್ವಿಯಾಗಿ ಮುಗಿಸಿ ಹತ್ತನೆಯ ವರ್ಷಕ್ಕೆ ಕಾಲಿಡುತ್ತಿದೆ. ಮಹಿಳಾ ಅಧ್ಯಯನ ಮತ್ತು ಜಾಗೃತಿಯನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ಆರಂಭವಾದ ಈ ಪತ್ರಿಕೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ದಶಮಾನೋತ್ಸವದತ್ತ ದಾಪುಗಾಲು ಹಾಕಿ ನಡೆದಿದೆ. ಈ ದಶಮಾನೋತ್ಸವ ವರ್ಷ ಎಲ್ಲರ ಪಾಲಿಗೆ ಸುಖ, ಸಂತೋಷ, ಸಮೃದ್ಧಿ, ಸಂತೃಪ್ತಿಯನ್ನು ತರಲಿ ಎಂದು ಹಾರೈಸುತ್ತೇವೆ.

ಪ್ರತಿ ವರ್ಷದಂತೆ ಈ ಬಾರಿಯೂ ಕೋಮು ದಳ್ಳುರಿಯ ಕಾವಿನಲ್ಲಿ ಹೊಸ ವರ್ಷ ಮೂಡುತ್ತಿಲ್ಲವೆಂಬ ಸಮಾಧಾನವು ಕ್ಷಣಿಕವಾಗಿ ಕಂಡುಬಂದರೂ ನೋವಿನ ಛಾಯೆಗೇನೂ ಕೊರತೆಯಿಲ್ಲ. ಕಳೆದ ದಿನಗಳಲ್ಲಿ ಮುನಿದ ಪ್ರಕೃತಿ ಮಾತೆಯ ರೋಷ ಭೀಷಣ ತಾಪಕ್ಕೆ ಇಡೀ ಮನುಕುಲವೇ ತಲ್ಲಣಿಸಿದೆ. ಬರಲಿರುವ ವರ್ಷವಾದರೋ ಇಂತಹ ಪ್ರಕೃತಿಯ ಪ್ರಕೋಪಗಳು ವಿಶ್ವವನ್ನು ಕಾಡದಿರಲಿ ಎಂದು ಆಶಿಸೋಣ.

ಕಳೆದ ತಿಂಗಳುಗಳಲ್ಲಿ ದೇಶದಲ್ಲಿ ನಡೆದ ಚುನಾವಣೆಗಳ ಫಲಿತಾಂಶ ಕೋಮುವಾದಿಗಳಿಗೆ ಒಂದು ಚಿಕ್ಕ ಪೆಟ್ಟು ಕೊಟ್ಟಿದೆಯೆನ್ನುವುದು ನಿಜವಾದರೂ, ಆ ಕಾರಣಕ್ಕಾಗಿ ವಿಶ್ರಮಿಸುವ ಸಮಯವಿದಲ್ಲ. ಸರ್ವಾಧಿಕಾರಿ ಧೋರಣೆಯ, ಪೈಶಾಚಿಕ ಸ್ವರೂಪದ ಕೋಮುಶಕ್ತಿಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕಾದ್ದು ಅಗತ್ಯವಾಗಿದೆ. ದೈವಶ್ರದ್ಧೆ, ಮತಶ್ರದ್ಧೆಗಳ ಮುಖವಾಡ ಹೊತ್ತ ಹಿಂದೂಗಳ, ಮುಸ್ಲಿಂರ ಹಾಗೂ ರಾಜಕಾರಣಿಗಳ ಅಹಂನ ವಿರುದ್ಧ ಹೋರಾಡಬೇಕಾದ ಧೀರಸಂಕಲ್ಪವನ್ನು ಈ ಹೊಸವರ್ಷದಲ್ಲಿ ನಾವು ತೊಡಬೇಕಿದೆ.

ಈ ದಶಮಾನೋತ್ಸನ ವರ್ಷದಲ್ಲಿ 'ಅಚಲ' ಮತ್ತು 'ಜಾಗೃತಿ' ಹೊಸ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಲು ನಿರ್ಧರಿಸಿದೆ. ಮಹಿಳಾ ಅಧ್ಯಯನ, ಸಂಘಟನೆ, ಜಾಗೃತಿಯ ಬಗ್ಗೆ ಕಾಳಜಿಯಿರುವ ಎಲ್ಲ ಪ್ರಗತಿಪರ ಸಂಘಟನೆಗಳೊಂದಿಗೆ ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಚಳುವಳಿ, ಸಾಕ್ಷರತೆ ಹಾಗೂ ವ್ಯಕ್ತಿತ್ವ ವಿಕಸನದ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ಮಹಿಳಾ ಸಮುದಾಯದೊಂದಿಗೆ ನಡೆಸುವ ಸಂಕಲ್ಪ ಹೊಂದಿದೆ. ಈ ಒಂಭತ್ತು ವರ್ಷಗಳಿಂದಲೂ ಪತ್ರಿಕೆ ಮತ್ತು ಕೇಂದ್ರದೊಂದಿಗೆ ಸಹಕರಿಸಿರುವ ಎಲ್ಲ ಹಿತೈಷಿಗಳಿಗೂ ವಂದಿಸಿ ಇನ್ನೂ ಹೆಚ್ಚಿನ ಸ್ತ್ರೀಪರ ನಿಲುವಿನ ಸಹೃದಯರ ಭಾಗವಹಿಸುವಿಕೆಯನ್ನು ಈ ನಿಟ್ಟಿನಲ್ಲಿ ಆಹ್ವಾನಿಸುತ್ತೇವೆ.

—ಎನ್. ಗಾಯತ್ರಿ

ಕವನ

ಕುಂತಿಯು ಹೊರೆ ಹೊಳೆಗೆ

ಕಲ ಕಲ ಕಲ ಗಂಗೆ
ಕೆಲದಲಿ ನಾನು
ಕೈಲಿ ಪೂಜಾಫಲ

ಏನಿರಬಹುದು ಬೀಜದೊಳಗೆ !
ಬೀಜ ಮಂತ್ರದೊಳಗೆ !? ಒಡೆದು
ನೋಡಬಹುದೇ ಕೌತುಕ
ಟಿತುಯಲುಗಿ ಹೊರಬಿತ್ತು.

ಸಪ್ತಾಶ್ವ ರಥಗಾಮಿ ನಗೆ
ಹಾಕಿ ಕೊಕ್ಕೆ ಹೃದಯಕ್ಕೆ
ಚಕ್ಕಗೆಳೆದುಕೊಂಡಾಗ ಎದೆಗೆ
ಎದೆಯೊಳಗೆ ನವಿರು
ನಿಮಿರು ಮೈಮೇಲೆ
ಅಮೇಲೆ ಪ್ರಕೃತಿ ಲೀಲೆ.

ಬೆಳಕು ಬೆಳಕಾಯ್ತು ಮನದೊಳಗೆ
ಮೈಯೊಳಗೆ ಹರಡಿ ಸಿರಿ
ಯಾಯ್ತು ಹೊರೆಯಾಯ್ತು
ಕಣ್ಮುಂದೆ ಕರ್ಣ
ಕುಂಡಲ ಕವಚದ
ಕೂಸು ಕಾನೀನ

ಈ ಭಾರ ಇನ್ನೂ ಭಾರ
ಹೊರಬಾರದಿತ್ತು ಮಂತ್ರ–ಬೀಜ
ಋಷಿಕೊಟ್ಟ–ಋಷಿಕೊಟ್ಟ ವರ–ಶಾಪ
ಆಗಬಾರದಿತ್ತು ಬೀಜ ಮಂತ್ರ

ಇಳಿಸಿ ಬುಟ್ಟಿಗೆ ಹೊತ್ತಫಲ
ಮೆತ್ತೆ ಹಾಸಿ ಇಳಿ
ಬಿಟ್ಟೆ ಹೊಳೆಗೆ
ಆಚೀಚೆ ಹೊರಳಿ ಕಣ್ಣು
ಬಾನೇಣಿಯಿಂದ ನನ್ನಿನಿಯ
ಇಳಿಯುತ್ತಿದ್ದ ಇಳೆಗೆ
ಅತ್ತ ಸಾಗಿದ ತನಯ
ತಂದೆ ಕಡೆಗೆ ಬುಟ್ಟಿಯೊಳಗೆ
ಗಂಗೆ ನಿಂತಳು ಸಾಕ್ಷಿ
ತಾ ಹೊತ್ತ ಹೊರೆಗೆ.

—ಟಿ. ಸಿ. ಪೂರ್ಣಿಮಾ



ಟೋನಿ ಮಾರಿಸನ್ - 1993ರ ನೋಬೆಲ್ ಪಾರಿತೋಷಿಕ ವಿಜೇತ ಕಪ್ಪು ಲೇಖಕಿ

ವ್ಯಕ್ತಿವಿಶೇಷ...

ಟೋನಿ ಮಾರಿಸನ್ 1993ರ ಸಾಹಿತ್ಯ ವಿಭಾಗದ ನೋಬೆಲ್ ಪಾರಿತೋಷಕ ಪಡೆದಿದ್ದಾರೆ. ಈಕೆ ನೋಬೆಲ್ ಪ್ರಶಸ್ತಿ ಪಡೆದ ಮೊಟ್ಟ ಮೊದಲ ಅಮೆರಿಕೆಯ ಕಪ್ಪು ಲೇಖಕಿ. ಈಕೆ ಸಾಹಿತ್ಯದಲ್ಲಿ ನೋಬೆಲ್ ಪಾರಿತೋಷಕ ಪಡೆದ ಎಂಟನೇ ಮಹಿಳೆ. 1938ರಲ್ಲಿ ಪರ್ಲ್ ಎಸ್. ಬಕ್ ಅವರಿಗೆ ನೋಬೆಲ್ ಪಾರಿತೋಷಕ ಬಂದ ಮೇಲೆ ಮತ್ತೊಮ್ಮೆ ಅಮೆರಿಕೆಯ ಮಹಿಳೆಗೆ ಈ ಪಾರಿತೋಷಿಕ ಬರುತ್ತಿರುವುದು ಈ ಬಾರಿಯೆ. ನಿಜ, ಹೆಚ್ಚು ಹೆಸರು ಮಾಡದ ಟೋನಿ ಅವರಿಗೆ ಈ ಪಾರಿತೋಷಿಕ ಬಂದದ್ದು ಹಲವರ ಅಣಕಕ್ಕೆ, ಆಶ್ಚರ್ಯಕ್ಕೆ ಕಾರಣವಾಗಿದೆ. ಆಕೆ ಕಪ್ಪು ಮಹಿಳೆ ಎಂಬ ಒಂದೇ ಕಾರಣಕ್ಕೆ ಪಾರಿತೋಷಿಕ ನೀಡಲಾಯಿತು ಎಂದು ಕೊಂಕು ನುಡಿದವರುಂಟು. ಬಿಳಿಯರಿಗೆ ಬಹುಮಾನ ಬಂದಾಗ ಕೇಳಿ ಬಾರದ ಅನುಮಾನದ ದನಿಗಳು, ಟೋನಿಗೆ ಪಾರಿತೋಷಿಕ ಬಂದೊಡನೆ ಹುಟ್ಟಿಕೊಂಡದ್ದು ಜನಾಂಗ ಭೇದದ ಸ್ಪಷ್ಟ ಅಪಸ್ವರವನ್ನು ಎತ್ತಿ ತೋರುತ್ತವೆ. ಇಂಥಾ ವರ್ಣಭೇದದ ವಿರುದ್ಧ ಟೋನಿ ಅವರು ತಮ್ಮ ಕಾದಂಬರಿಗಳ ಮೂಲಕ ಸತತ ಸಮರ ಸಾರಿದ್ದಾರೆ. ಈಕೆಯ ಆರು ಕಾದಂಬರಿಗಳು ಸಣ್ಣ ಪಟ್ಟಣಗಳ ಕಪ್ಪು ಅಮೆರಿಕನ್ನರ ಕತೆ ಹೇಳುತ್ತವೆ. ಬಡತನದ ಬಗಲಿನಲ್ಲೇ ಹೆಣ್ಣಾಗಿ ಹುಟ್ಟಿ ಬೆಳೆದ ಈಕೆಯ ಬದುಕು ಯಥೇಚ್ಛವಾಗಿ ಕಥಾವಸ್ತುವನ್ನು ಒದಗಿಸಿ ಕೊಟ್ಟಿತು. ಆಕೆಯ ಬಾಲ್ಯ ಕಪ್ಪು ಜನರ ಮೇಲೆ ಬಿಳಿಯರ ಒಡೆತನ, ಕ್ರೌರ್ಯದ ಕತೆಗಳಿಂದಲೇ ತುಂಬಿತ್ತು. ಕಡು ಬಡತನ ಈಕೆಯನ್ನು, ಹನ್ನೆರಡರ ಎಳೆ ವಯಸ್ಸಿನಲ್ಲೇ ವಿದ್ಯಾಭ್ಯಾಸದೊಡನೆ ದುಡಿಯುವಂತೆ ಮಾಡಿತ್ತು.

ಅಮೆರಿಕೆಯ ಕಪ್ಪು ಜನರ ಕಳೆದು ಹೋದ ಇತಿಹಾಸವನ್ನು ಈಕೆಯ ಪುಸ್ತಕ ಹುಡುಕುತ್ತಾ ಹೊರಡುತ್ತದೆ. ಈಕೆಯ ದಾರ್ಶನಿಕ ಕತೆಗಳು ಕಾವ್ಯ ಗುಣವನ್ನು ಒಳಗೊಂಡಿವೆ. 'ಅಮೆರಿಕೆಯ ಬದುಕಿನ ಕಪ್ಪು ವಾಸ್ತವಕ್ಕೆ ಹೊಸ ಜೀವ ಕೊಟ್ಟ' ಈಕೆಯನ್ನು ಸ್ವೀಡನ್ನಿನ ಅಕಾಡೆಮಿ 'ಶ್ರೇಷ್ಠ ಸಾಹಿತಿ' ಎಂದು ಶ್ಲಾಘಿಸಿದೆ.

62 ವರ್ಷ ಟೋನಿ ಓಹಿಯೋದಲ್ಲಿ ಹುಟ್ಟಿದಾಕೆ. ಹೋವರ್ಡ್ ವಿಶ್ವವಿದ್ಯಾಲಯದಿಂದ 1953ರಲ್ಲಿ ಆಂಗ್ಲ ಭಾಷೆಯ ಪದವಿ ಪಡೆದ ಟೋನಿ, 1955ರಲ್ಲಿ ಸ್ನಾತ್ತಕೋತ್ತರ ಪದವಿ ಪಡೆದರು. ಹೆರಾಲ್ಡ್ ಮಾರಿಸನ್ ಅವರನ್ನು ಭೇಟಿಯಾಗಿ ವಿವಾಹವಾದರು. ಆದರೆ ಬಹುಬೇಗ ಅವರ ವಿವಾಹ ವಿಚ್ಛೇದನದಲ್ಲಿ ಮುಗಿಯಿತು. ಕೆಲಸ ಬದಲಾಯಿಸಿದ ಈಕೆ 'ರ್‍ಯಾಂಡಮ್ ಹೌಸ್'ನಲ್ಲಿ ಪಠ್ಯ ಪುಸ್ತಕಗಳ ಸಂಪಾದಕಿಯಾದರು.

ಹೋವರ್ಡ್‌ನಲ್ಲಿ ಕಲಿಸುತ್ತಿದ್ದ ಸಮಯದಲ್ಲಿ ಕತೆ–ಕಾದಂಬರಿ ಬರೆಯಲು ಆರಂಭಿಸಿದ ಈಕೆಯ ಮೊದಲ ಕೃತಿ 'ದಿ ಬ್ಲ್ಯೂಯೆಸ್ಟ್ ಐ'. ಕಪ್ಪು ಹುಡುಗಿಯೊಬ್ಬಳು ನೀಲಿ ಕಣ್ಣುಗಳಿಗಾಗಿ ತೀವ್ರವಾಗಿ ಆಸೆ ಪಡುವ ಕಥಾವಸ್ತುವಿನ ಸುತ್ತ ಹೆಣೆದ ಈ ಕಾದಂಬರಿ 1970ರಲ್ಲಿ ಪ್ರಕಟಗೊಂಡಿತು. 1973ರಲ್ಲಿ ಪ್ರಕಟವಾದ ಈಕೆಯ ಕೃತಿ 'ಸುಲ' (SULA)ದಲ್ಲಿ ಕುಡಿತದ ಚಟಕ್ಕೆ ಅಂಟಿಬಿದ್ದ ಮಗನನ್ನು ಕೊಲ್ಲುವ ತಾಯಿಯ ಚಿತ್ರವಿದೆ. ಕಪ್ಪು ಜನರನ್ನು ಸ್ತ್ರೀವಾದಿಗಳಾಗಿ ಬಿತ್ತರಿಸುತ್ತದೆ. ಬದುಕಿನ ಅನಿವಾರ್ಯದಲ್ಲಿ ಕಪ್ಪು ಹೆಣ್ಣುಗಳು, ಗಂಡಸರೊಡನೆ ಹೆಗಲು ಕೊಟ್ಟು ನಿಂತು

★ ನೇಮಿ

ಕಾರ್ಮಿಕ ಹಕ್ಕುಗಳಿಗಾಗಿ ಹೋರಾಡುತ್ತಾರೆ. 1977ರಲ್ಲಿ ಪ್ರಕಟವಾದ 'ಸಾಂಗ್ ಆಫ್ ಸಾಲೊಮನ್', ಕಪ್ಪು ಜನರ ಬೇರುಗಳನ್ನು ಹುಡುಕಿ ಹೊರಟಿದೆ. 1981ರಲ್ಲಿ ಹೊರಬಿದ್ದ 'ಟಾರ್ ಬೇಬಿ' (TAR BABY) ಪ್ಯಾರೀಸಿನ ಬಿಳಿ ಜಗತ್ತು ಮತ್ತು ತನ್ನ ಕಪ್ಪು ಪ್ರಿಯತಮನ ನಡುವೆ ಹರಿದು ನಿಂತ ಕಪ್ಪು ಹುಡುಗಿಯ ಕತೆ ಹೇಳುತ್ತದೆ. ಕಪ್ಪು ಗುಲಾಮ ಹೆಣ್ಣಿನ ದುರಂತದ ಕತೆ ಹೇಳುವ 1987ರಲ್ಲಿ ಹೊರಬಿದ್ದ ಈಕೆಯ 'ಬಿಲವೆಡ್' (BELOVED) ಪುಸ್ತಕಕ್ಕೆ 'ಪುಲಿಟ್ಸರ್ ಪ್ರಶಸ್ತಿ' ಬಂದಿದೆ. 1992ರಲ್ಲಿ 'ಜಾಸ್' (JAZZ) ಹೊರಬಿದ್ದಿದೆ. ದ್ವೇಷ ಹತಾಷೆಯ ಜಗತ್ತಿನಲ್ಲಿ, ಆಸೆ ಭರವಸೆಯನ್ನು ಬಿಂಬಿಸುತ್ತದೆ.

'ಬರೆಯುವ ಮುನ್ನ ನಾನು ಓದುಗಳು' ಎಂದು ಹೇಳುವ ಟೋನಿ ಮಾರಿಸನ್, 'ಏನು ಓದಿದರೂ ಅದನ್ನು ಮಾನವೀಯ ದೃಷ್ಟಿಯಿಂದಲೇ ಓದುವೆ' ಎನ್ನುತ್ತಾರೆ. ಅದೇ ಮಾನವೀಯತೆ ಅವರ ಕಾದಂಬರಿಗಳಲ್ಲಿ ಹಾಸು ಹೊಕ್ಕಿದೆ. ವರ್ಣಭೇದದ ಜಗತ್ತಿನಲ್ಲಿ ಕರಿಯರ ಸ್ಥಿತಿ ಇಂದಿಗೂ ಶೋಚನೀಯ. ಈ ಅಸಮಾನತೆಯ ಸಮಾಜದಲ್ಲಿ ಸ್ತ್ರೀ–ಪುರುಷರಿಬ್ಬರ ಜೀವನ ಸ್ಥಿತಿಯೂ ಅಷ್ಟೇ ಶೋಚನೀಯ. ಸುಮಾರು 400 ವರ್ಷಗಳಿಂದ ಯಾರೂ ಪ್ರಯತ್ನಿಸದಿದ್ದ ಬಿಳಿಯರ ಪ್ರಭಾವಿತದ ಸಮಾಜದಲ್ಲಿ ಕರಿಯ ಹೆಣ್ಣಾಗಿ ಬದುಕು ಹೇಗಿರುವುದೆಂದು ಅತ್ಯಂತ ಮಾನವೀಯತೆಯಿಂದ ಚಿತ್ರಿಸುವ ಪ್ರಯತ್ನ ಟೋನಿ ಮಾರಿಸನ್ ಅವರದು.

ದಶಕಗಳಿಂದ ಬರೆಯುತ್ತಿರುವ ಟೋನಿಯವರ ಕೃತಿಗಳು ಉಪೇಕ್ಷೆಗೆ, ಉದಾಸೀನಕ್ಕೆ ಗುರಿಯಾಗಿದ್ದವು. ಹೆಂಗಸರು, ಕಪ್ಪು ಜನರು ಬರೆಯುವುದನ್ನು ಗಮನಕ್ಕೆ ತೆಗೆದುಕೊಳ್ಳದ ಸಮಾಜದಲ್ಲಿ, ಕಪ್ಪು ಮತ್ತು ಹೆಣ್ಣಾದ ಟೋನಿ ಗುರುತಿಸಲ್ಪಡಲು ಸಮಯ ಹಿಡಿಸಿತು. ವರ್ಣಭೇದ, ಜನಾಂಗ ಭೇದದಿಂದ ಬಿರಿದೊಡೆದ ಅಮೆರಿಕೆಯಲ್ಲಿ, ಕಪ್ಪು ಜನರ ಕಪ್ಪು ಅನುಭವಗಳನ್ನು ಕಪ್ಪು ಕಣ್ಣ ನೋಟದಿಂದ ಕಾವ್ಯಾತ್ಮಕವಾಗಿ ಈಕೆಯ ಕೃತಿಗಳು ದಾಖಲಿಸಿವೆ. ಕಪ್ಪು ಜನರ ಕೊಡುಗೆಯನ್ನು ಗಂಭೀರವಾಗಿ ಪರಿಗಣಿಸಿದ ಮೊದಲ ಯತ್ನ ಇದಾಗಿದೆ.

★

ದುಷ್ಪರಿಣಾಮದ ಆಗರ 'ನಾರ್‌ಪ್ಲ್ಯಾಂಟ್'

★ 'ಸಹೇಲಿ'

ಕುಟುಂಬ ಕಲ್ಯಾಣ ಯೋಜನೆಯಲ್ಲಿ ಗರ್ಭ ನಿರೋಧಕ ಸಾಧನಗಳ ಪಾತ್ರ ಪ್ರಮುಖ. ಅವು ಹಲವು ಹತ್ತಾರು ಇವೆ. ಅವುಗಳಲ್ಲಿ ನಾರ್‌ಪ್ಲ್ಯಾಂಟ್ ಕೂಡ ಒಂದು. ಒಂದು ಹಾರ್ಮೋನ್ ಸಾಧನವಾಗಿರುವ 'ನಾರ್ ಪ್ಲ್ಯಾಂಟ್'ನ ದುಷ್ಪರಿಣಾಮದ ಬಗೆಗೆ ಹಾಗೂ ಅದರ ಬಳಕೆ ಕುರಿತ ಪರೀಕ್ಷೆಗಳ ಬಗೆಗೆ ಈ ಲೇಖನದಲ್ಲಿ ಬೆಳಕು ಚೆಲ್ಲುವ ಪ್ರಯತ್ನ ನಡೆಸ ಲಾಗಿದೆ.

ಕೃತಕವಾಗಿ ತಯಾರಿಸಿದ ಲೆವೊನೊಜೆಸ್ಟ್ರೆಲ್ ಹಾರ್ಮೋನ್ ರಬ್ಬರ್ ಟ್ಯೂಬ್ ಅಥವಾ ನಳಿಕೆ ಆಕಾರದ ಸಾಧನವನ್ನು ನಾರ್‌ಪ್ಲ್ಯಾಂಟ್ ಹೊಂದಿದೆ. ಈ ರಬ್ಬರ್ ನಳಿಕೆಯು ದೇಹದೊಳಗೆ ಮುರಿಯುವುದಿಲ್ಲ ಅಥವಾ ದೇಹದೊಳಗೆ ಬೇರೆ ಯಾವುದೇ ಪ್ರಕ್ರಿಯೆಗೆ ಒಳಗಾಗುವುದಿಲ್ಲ. ಈ ರಬ್ಬರ್ ಟ್ಯೂಬ್‌ನೊಳಗಿನ ಹಾರ್ಮೋನ್ ಗರ್ಭನಿರೋಧಕ ಶಕ್ತಿಯನ್ನು ಹೊಂದಿದೆ. ಹಾರ್ಮೋನ್ ತುಂಬಿದ ಟ್ಯೂಬ್‌ಅನ್ನು ಮಹಿಳೆಯ ತೋಳಿನ ಚರ್ಮದೊಳಗೆ ಇಡಲಾಗುತ್ತದೆ. ಪ್ರತಿದಿನ ಸಣ್ಣ ಪ್ರಮಾಣದ ಗರ್ಭ ನಿರೋಧಕವು ದೇಹದೊಳಗೆ, ಸಂಚಲನೆಗೆ ಬಿಡುಗಡೆಯಾಗುತ್ತದೆ. ಗರ್ಭವಾಗುವಿಕೆ ತಡೆಗೆ ಇಷ್ಟು ಸಾಕು. ಒಂದು ರೀತಿಯಲ್ಲಿ ಚರ್ಮ ದೊಳಗೆ ಇದನ್ನು ನಾಟಲಾಗುವುದು. ಅದಕ್ಕೆಂದೇ ಇದಕ್ಕೆ ನಾರ್‌ಪ್ಲ್ಯಾಂಟ್ ಎಂಬ ಹೆಸರು.

ಎರಡು ಬಗೆಯ ನಾರ್‌ಪ್ಲ್ಯಾಂಟ್‌ಗಳು ಉಂಟು. ನಾರ್‌ಪ್ಲ್ಯಾಂಟ್ (ಆರ್) ಅಥವಾ ಬರೀ ನಾರ್‌ಪ್ಲ್ಯಾಂಟ್ ಎಂಬುದು ಒಂದು, ಮತ್ತೊಂದು ನಾರ್‌ಪ್ಲ್ಯಾಂಟ್(2). ಈ ಎರಡೂ ಲೆವೊನೊಜೆಸ್ಟ್ರೆಲ್ ಹಾರ್ಮೋನು ಹೊಂದಿರುತ್ತವೆ. ನಾರ್‌ಪ್ಲ್ಯಾಂಟ್ (ಆರ್)ನಲ್ಲಿ ತಲಾ 3.4 ಸೆಂಟಿಮೀಟರ್ ಉದ್ದದ ಆರು ಟ್ಯೂಬ್ ಅಥವಾ ನಳಿಕೆಗಳಿದ್ದರೆ ನಾರ್‌ಪ್ಲ್ಯಾಂಟ್ (2)ನಲ್ಲಿ ತಲಾ 4.4 ಮೀಟರ್ ಉದ್ದದ ಕಂಬಿ ಇರುತ್ತದೆ.

ನಾರ್‌ಪ್ಲ್ಯಾಂಟ್ ವಿಧಾನವನ್ನು ಅಮೆರಿಕದ ಜನ ಸಂಖ್ಯಾ ಮಂಡಳಿಯು ಅಭಿವೃದ್ಧಿ ಪಡಿಸಿತು. ಗರ್ಭ ನಿರೋಧಕ ಸಂಶೋಧನೆ ಕುರಿತ ಅಂತರರಾಷ್ಟ್ರೀಯ ಸಮಿತಿ ವತಿಯಿಂದ (ಐಸಿಸಿಆರ್) ನಾರ್‌ಪ್ಲ್ಯಾಂಟ್‌ನ ಪರೀಕ್ಷೆ, ಪ್ರಯೋಗ ನಡೆದಿದೆ. ಈ ಸಮಿತಿಯು ಜನ ಸಂಖ್ಯಾ ಮಂಡಳಿಯ ಒಂದು ಅಂಗ. ಮಂಡಳಿಯ ಮಾರಾಟ ಚಿಹ್ನೆಯಾಗಿ ಇದನ್ನು ರಿಜಿಸ್ಟರ್ ಮಾಡ ಲಾಗಿದೆಯಾದರೂ ಮಂಡಳಿಯ ಲೈಸೆನ್ಸ್ ಮೂಲಕ ಫಿನ್‌ಲೆಂಡ್‌ನ ಹುತಾಮುಕಿ ಓವೈ ಲೈರಾಸ್ ಸಂಸ್ಥೆಯು ಇದನ್ನು ತಯಾರಿಸುತ್ತಿದೆ. ಹಾರ್ಮೋನಿನ ಹಕ್ಕು ಸಾಮ್ಯ ಪಡೆದಿರುವ ವೆಥ್–ಏರ್ಸ್ಟ್ ಸಂಸ್ಥೆಯು ಅಮೆರಿಕದಲ್ಲಿ ಇದರ ಮಾರಾಟ ಮಾಡುತ್ತಿದೆ. ಭಾರತಕ್ಕೆ ಇದನ್ನು ಸರಬರಾಜು ಮಾಡುವ ಸಂಸ್ಥೆ ಯುಎನ್‌ಎಫ್‌ಪಿಎ ಆಗಿದೆ.

ಇತಿಹಾಸ

ಚರ್ಮದೊಳಗೆ ನಾಟಬಹುದಾದ ಇಂಥ ಸಾಧನಕ್ಕೆ ಭಾರತದ ಮಹಿಳೆ ಒಳಗಾಗಿದ್ದು ಮೊದಲು 1969ರಲ್ಲಿ. ಆಗ ಪ್ರಯೋಗ (ಪರೀಕ್ಷೆ)ಗೆ ಬಳಸಿದ್ದ ಹಾರ್ಮೋನಿನ ಹೆಸರು ಮೆಜೆಸ್ಟ್ರೋಲ್, 3 ಮತ್ತು 4 ನಾರ್‌ಎಥಿನ್ ಟ್ರೋನ್. 1975ರಲ್ಲಿ ಮೆಜೆಸ್ಟ್ರೋಲ್ ಹಾರ್ಮೋನು ಇದ್ದ ಸಾಧನಗಳನ್ನು ಹಿಂತೆಗೆದುಕೊಳ್ಳಲಾಯಿತು. ಅದು ಬೇಟೆ ನಾಯಿಗಳಲ್ಲಿ ಕ್ಯಾನ್ಸರ್ ಉಂಟುಮಾಡಿದ್ದೇ ಅದಕ್ಕೆ ಕಾರಣ. ಹೀಗಾಗಿ 1982ರ ವೇಳೆಗೆ ಐ.ಸಿ.ಎಂ.ಆರ್. ಸಂಸ್ಥೆಯು ನಾರ್‌ಪ್ಲ್ಯಾಂಟ್ ಪರೀಕ್ಷೆ ಮಾತ್ರ ಸಾಕು ಎಂದು ನಿರ್ಧರಿಸಿತು.

ವೈದ್ಯಕೀಯ ಪರೀಕ್ಷೆ

ಭಾರತದಲ್ಲಿ ನಾರ್‌ಪ್ಲ್ಯಾಂಟ್‌ನ ವೈದ್ಯಕೀಯ ಪರೀಕ್ಷೆಯನ್ನು ಹಂತ ಹಂತವಾಗಿ ಕೈಗೊಳ್ಳಲಾಯಿತು, ಈ ಸಾಧನದ ಪರಿಣಾಮ (ದುಷ್ಪರಿಣಾಮ), ಸಾಮರ್ಥ್ಯ, ದಕ್ಷತೆಯನ್ನು ಕಂಡುಕೊಳ್ಳಲು ದೆಹಲಿಯ ಎರಡು ಕೇಂದ್ರಗಳಲ್ಲಿ ಅಧ್ಯಯನ ನಡೆಸಲಾಯಿತು.(1982ರಲ್ಲಿ).

1983–84ರಲ್ಲಿ ನಾರ್‌ಪ್ಲ್ಯಾಂಟ್ (2)ಅನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. 1983ರ ಆಗಸ್ಟ್‌ನಿಂದ 1985ರ ಸೆಪ್ಟೆಂಬರ್ ಒಳಗೆ 15 ಕೇಂದ್ರಗಳಲ್ಲಿ 1569 ಮಹಿಳೆಯರು ವಿವಿಧ ಆರೋಗ್ಯ ಕೇಂದ್ರಗಳಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿ ಕೊಂಡಿದ್ದರು.

1986ರ ಆರಂಭದಲ್ಲಿ ಕಾರ್ಯಕ್ರಮ ಅನುಷ್ಠಾನ ಪೂರ್ವ ಅಧ್ಯಯನವೊಂದನ್ನು ನಡೆಸಲಾಯಿತು. ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ ನಾರ್‌ಪ್ಲ್ಯಾಂಟ್ (2)ಅನ್ನು ಒಂದು ಸಾಧನವಾಗಿ ಬಳಸಲು ಅಗತ್ಯವಾದ ಸೌಲಭ್ಯ, ಸೌಕರ್ಯಗಳನ್ನು ಗೊತ್ತುಪಡಿಸಿಕೊಳ್ಳಲು ಈ ಅಧ್ಯಯನ ನಡೆಸಲಾಯಿತು. 1989ರಲ್ಲಿ ನಾರ್‌ಪ್ಲ್ಯಾಂಟ್ (2)ಅನ್ನು ಚರ್ಮದೊಳಗೆ ನಾಟುವ ಕೆಲಸವನ್ನು ಸ್ಥಗಿತಗೊಳಿಸಲಾಯಿತು. ಸಾಧನದ ಪೂರಕ ಅಂಶವಾದ ಎಲೆಸ್ಟೋಮರ್ 382 ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಾಗದ್ದೇ ಇದಕ್ಕೆ ಕಾರಣ. ಸಾಧನದ ಸ್ವರೂಪವನ್ನು ಪುನರ್‌ರೂಪಿಸಲು ಇದು ಪ್ರೇರಣೆ ನೀಡಿತು. 1988–89ರ ವೇಳೆಗೆ 458 ಮಹಿಳೆಯರು ನಾರ್‌ಪ್ಲ್ಯಾಂಟ್ (2)ನ ಅಧ್ಯಯನದ ಒಂದು ಅಂಗವಾಗಿದ್ದರು.

ವಿಪರ್ಯಾಸವೆಂದರೆ ನಾರ್‌ಪ್ಲ್ಯಾಂಟ್‌ನ ಕಾರ್ಯಾಚರಣೆ ಪೂರ್ಣವಾಗಿ ಸ್ಪಷ್ಟವಾಗಿಲ್ಲದೇ ಇರುವುದು. ಗರ್ಭವಾಗುವಿಕೆಯನ್ನು ಹೇಗೆ ತಡೆಯುತ್ತದೆ ಎಂಬುದೂ ಸ್ಪಷ್ಟವಾಗಿಲ್ಲ. ಆದರೆ ಕಾರ್ಯಾಚರಣೆ ವಿಧಾನವನ್ನು ಮಾತ್ರ ಯೋಜಿಸಿಕೊಳ್ಳಬಹುದು.

ಅಂಡಾಣು ಯಾವುದೇ ರೀತಿಯಲ್ಲಿ ಪ್ರಕ್ರಿಯೆಯಲ್ಲಿ ಭಾಗವಹಿಸದಂತೆ ಮಾಡುವುದು ನಾರ್‌ಪ್ಲ್ಯಾಂಟ್‌ನ ಒಂದು ಗುಣ. ಫಲೋತ್ಪತ್ತಿಯ ಅಂಡಾಣು ಮುಂದಿನ ಕ್ರಿಯೆಗೆ ಸಾಗದಂತೆ ಮಾಡುವುದೂ ನಾರ್‌ಪ್ಲ್ಯಾಂಟ್‌ನ ಕಾರ್ಯ ವಿಧಾನದಲ್ಲಿ ಒಂದು. ಹೀಗಾಗಿ ಅಂಡಾಣು ಒಡೆದು ಆರಂಭಿಕ ಗರ್ಭಪಾತ ಉಂಟಾಗಬಹುದು. ಅಂಡನಾಳದ ಹಿಗ್ಗುವಿಕೆ ಕುಗ್ಗುವಿಕೆಯನ್ನು ಅದು ಕಡಿಮೆ ಮಾಡಿ ಅಂಡಾಣು ಸಾಗಲು ವಿಳಂಬ ಉಂಟಾಗಬಹುದು. ಇದರರ್ಥ ಸಂಬಂಧಿತ ಅಂಗಾಗಗಳಲ್ಲಿ ಆಗಾಗ್ಗೆ ಬದಲಾವಣೆಯನ್ನು ನಾರ್‌ಪ್ಲ್ಯಾಂಟ್ ಮಾಡಬಹುದು ಎನ್ನುವುದೇ ಆಗಿದೆ.

ನಾರ್‌ಪ್ಲ್ಯಾಂಟ್ (ಆರ್)ನ ಪ್ರಭಾವವು ಐದು ವರ್ಷ ಎನ್ನಲಾಗಿದೆ. ಆದರೆ ನಾರ್‌ಪ್ಲ್ಯಾಂಟ್ (2) ಮೂರು ವರ್ಷ ಮಾತ್ರ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲದು. ಆದರಿಂದ ಉಂಟಾಗಬಹುದಾದ ತೀವ್ರ ಪರಿಣಾಮಗಳೆಂದರೆ ತೂಕ, ರಕ್ತ ಸರಬರಾಜು, ದೇಹದ ಕೊಬ್ಬು ಮತ್ತು ದೈಹಿಕ ಚಟುವಟಿಕೆ ಮೇಲೆ ಪ್ರಭಾವ ಎಂದು ಹೇಳಲಾಗಿದೆ.

ನಾರ್‌ಪ್ಲ್ಯಾಂಟ್‌ಅನ್ನು ತೋಳಿನ ಒಳಭಾಗದಲ್ಲಿ ಇಡಲಾಗುವುದು. ಚರ್ಮದ ಮೇಲೆ ಒಂದು ಸ್ವಲ್ಪ ಸೀಳು ಮಾಡಿ ಅದರ ಮೂಲಕ ನಾರ್‌ಪ್ಲ್ಯಾಂಟ್‌ಅನ್ನು ಒಳಗೆ ತೂರಿಸಲಾಗುತ್ತದೆ. ಚರ್ಮದ ಕೆಳಗೆ ಅದು ಸರಿಯಾಗಿ ಇರುವಂತೆ ನೋಡಿಕೊಳ್ಳಲಾಗುವುದು. ಸೀಳಿದ ಭಾಗವನ್ನು ನಂತರ ಬ್ಯಾಂಡೇಜ್ ಕಟ್ಟಿ ಮುಚ್ಚಲಾಗುವುದು. ಈ ವಿಧಾನ ಕೇವಲ ಕೆಲವೇ ನಿಮಿಷಗಳಲ್ಲಿ ಪೂರ್ಣಗೊಳ್ಳುವಂಥದ್ದು. ಆದರೆ ಟ್ಯೂಬ್ ಅಥವಾ ನಳಿಕೆಯನ್ನು ಮತ್ತೆ ಹೊರಕ್ಕೆ ತೆಗೆಯುವುದು ಹೆಚ್ಚು ಸಮಯ ಪಡೆದುಕೊಳ್ಳುವಂಥ ವಿಧಾನ (ಅಂದರೆ ಸುಮಾರು 30 ನಿಮಿಷ). ಈ ವಿಳಂಬ ಕ್ರಿಯೆಗೆ ಕಾರಣಗಳುಂಟು. ಚರ್ಮದ ಒಳಗಿರುವ ನಳಿಕೆ ಸುತ್ತ ಕೆಲ ಸಮಯದ ನಂತರ ತೆಳುವಾದ ಅಂಗಾಂಗ (ಟಿಶ್ಯೂ) ಬೆಳೆದಿರುತ್ತದೆ. ಹೀಗಾಗಿ ನಾರ್‌ಪ್ಲ್ಯಾಂಟ್‌ಅನ್ನು ಹೆಕ್ಕಿ ತೆಗೆಯಬೇಕಾಗುತ್ತದೆ.

ಬಳಕೆಯ ತೊಂದರೆ

ನಾರ್‌ಪ್ಲ್ಯಾಂಟ್ ಋತುಚಕ್ರದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಸಾಮಾನ್ಯವಾದ ಮುಟ್ಟಿನ ಚಕ್ರವನ್ನು ಅಸ್ತವ್ಯಸ್ತಗೊಳಿಸುತ್ತದೆ. ಮುಟ್ಟು (ರಕ್ತ ಸ್ರಾವ) ಹೊರಬೀಳುವ ದಿನಗಳು ಹೆಚ್ಚಾಗುತ್ತವೆ. ಪದೇ ಪದೇ ಮುಟ್ಟಾಗುವುದರಿಂದ ಋತುಚಕ್ರದ ದಿನ

ವನ್ನು ಅಂದಾಜು ಮಾಡುವುದು ಖಂಡಿತಾ ಕಷ್ಟ. ರಕ್ತಸ್ರಾವ ಹೆಚ್ಚಾಗುವ ಸಂದರ್ಭಗಳೇ ಹೆಚ್ಚು.

ಈ ಹಿನ್ನೆಲೆಯಲ್ಲಿ ಐಸಿಎಂಆರ್ ಒಂದು ಅಧ್ಯಯನ ನಡೆಸಿತ್ತು. ಅದರಂತೆ ಶೇಕಡ 60ಕ್ಕೂ ಹೆಚ್ಚು ಮಹಿಳೆಯರಿಗೆ ಮುಟ್ಟು 'ಮಾಯ'ವಾಗಿತ್ತು ಅಥವಾ ರಕ್ತಸ್ರಾವ ಮುಂದುವರಿದೇ ಇತ್ತು. ಎಷ್ಟೋ ಮಂದಿಗೆ 80 ದಿನಗಳವರೆಗೂ ರಕ್ತಸ್ರಾವ ಮುಂದುವರಿದದ್ದು ಉಂಟು. ಈ ಕಾರಣದಿಂದ ಹೆಚ್ಚು ರಕ್ತ ಕಳೆದುಕೊಂಡಿದ್ದ ಮಹಿಳೆಯರ ರಕ್ತದಲ್ಲಿ ಕಬ್ಬಿಣದ ಅಂಶ ಕಡಿಮೆಯಾಗಿದ್ದು ಕಂಡು ಬಂದಿತ್ತು.

ನಾರ್‌ಪ್ಲ್ಯಾಂಟ್ ಅಗಾಂಗಗಳ ಕಾರ್ಯಾಚರಣೆ ಮೇಲೂ ಪರಿಣಾಮ ಬೀರುವುದರಿಂದ ಇದು ದೇಹದ ಮೇಲೆ ಪರೋಕ್ಷ ಪರಿಣಾಮ ಬೀರುತ್ತದೆ. ತೀವ್ರ ತಲೆನೋವು, ಆತಂಕ, ಹತಾಶ ಭಾವನೆ, ವಾಂತಿ, ತಲೆಸುತ್ತು ಇವೇ ಮುಂತಾದವು ಉಂಟಾಗುವುದು ಕಂಡು ಬಂದಿದೆ. ದೇಹದ ತೂಕದಲ್ಲಿ 10 ಕೆ.ಜಿ.ವರೆಗೆ ಪಲ್ಲಟ ಕಂಡುಬರಬಹುದು. ಹಾರ್ಮೋನ್ ಅಸಮತೋಲನದ ಕಾರಣ ಅನೇಕ ಮಹಿಳೆಯರಿಗೆ ಬೇಡದ ಕೂದಲು ಕಂಡು ಬಂದಿರುವ ಪ್ರಸಂಗಗಳೂ ಉಂಟು.

ನಾರ್‌ಪ್ಲ್ಯಾಂಟ್‌ನಿಂದ ರಕ್ತದ ಒತ್ತಡ ಏರಿ, ಎದೆ ನೋವಿನ ಸಮಸ್ಯೆ ಉಂಟಾಗುವುದು ಕಂಡುಬಂದಿದೆ. ನಾರ್‌ಪ್ಲ್ಯಾಂಟ್ ಬಳಸುವ ಶೇಕಡ 10ಕ್ಕೂ ಹೆಚ್ಚು ಮಂದಿಗೆ ಅಂಡಾಶಯದ ಬಳಿಗಂಟು ಕಂಡುಬಂದಿದೆ. ಇದು ಕಿಬ್ಬೊಟ್ಟೆ ನೋವಿಗೆ ಹಾದಿ ಮಾಡುತ್ತದೆ. ಕೆಲ ಸಮಯದ ನಂತರ ಗಂಟು ಹೋಗುತ್ತದೆ ಎಂದು ಹೇಳಲಾಗಿದ್ದರೂ ಅನೇಕ ಪ್ರಕರಣಗಳಲ್ಲಿ ಶಸ್ತ್ರಕ್ರಿಯೆಯಿಂದಲೇ ಗಂಟು ತೆಗೆಯಬೇಕಾದ ಪ್ರಸಂಗಗಳಿವೆ.

ಸುಮಾರು 20 ವರ್ಷಕ್ಕೂ ಹೆಚ್ಚುಕಾಲ ನಾರ್‌ಪ್ಲ್ಯಾಂಟ್ ಕುರಿತ ಪರೀಕ್ಷೆ ನಡೆದಿದ್ದರೂ ವ್ಯವಸ್ಥಿತ ರೀತಿಯಲ್ಲಿ ದೀರ್ಘಾವಧಿ ಸಂಕಷ್ಟಗಳ ಬಗೆಗೆ ಯಾವುದೇ ಅಧ್ಯಯನದ ವರದಿ ಇಲ್ಲ. ಮೇಲೆ ವಿವರಿಸಿರುವ ದುಷ್ಪರಿಣಾಮಗಳು ಕಾಯಂ ಅಥವಾ ತಾತ್ಕಾಲಿಕವೇ ಎಂಬುದೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಅಂಥ ವರದಿಯೊಂದು ಲಭ್ಯವಾಗುವವರೆಗೆ ಈ ದುಷ್ಪರಿಣಾಮಗಳು ದೀರ್ಘಾವಧಿ ಎಂದೇ ಭಾವಿಸಬೇಕಾಗುತ್ತದೆ.

ನಾರ್‌ಪ್ಲ್ಯಾಂಟ್ ಬಳಕೆಯಿಂದ ಕೆಲವರಿಗೆ ಕುತ್ತಿಗೆ

ಬಳಕೆಗೆ ಕಿವಿಮಾತು

a) ಯಾರು ಬಳಸಬಾರದು :

1. ಗರ್ಭವಾಗಿರುವುದು ಖಚಿತವಾದಾಗ.
2. ಎದೆ ಹಾಲು ಉಣಿಸುವವರು.
3. ಹೆಚ್ಚಿನ ರಕ್ತಸ್ರಾವವಿದ್ದು ಇನ್ನೂಪತ್ತೆಗೆ ಸಿಗದಿದ್ದಾಗ.
4. ಋತುಚಕ್ರ ಅವ್ಯವಸ್ಥಿತವಾಗಿದ್ದಾಗ.
5. ಪಿತ್ತಕೋಶ ಕಾಯಿಲೆ ಉಳ್ಳವರು.
6. ಎದೆಗೆ ಸಂಬಂಧಿಸಿದ ಸಮಸ್ಯೆ ಉಳ್ಳವರು.
7. ಸ್ತನ, ಅಂಡಾಶಯ ಅಥವಾ ಗರ್ಭಾಶಯ ಕ್ಯಾನ್ಸರ್ ಉಳ್ಳವರು.
8. ಹಿಂದಿನ ಗರ್ಭ ಕಾಲದಲ್ಲಿ ಕಾಮಾಲೆ ರೋಗ ಆಗಿದ್ದರೆ.
9. ರಕ್ತಹೀನತೆ ಇದ್ದಾಗ.
10. ಕ್ಷಯ ನಿರೋಧಕ ಔಷಧಿ ತೆಗೆದುಕೊಳ್ಳುತ್ತಿರುವವರು.

b) ನಾರ್‌ಪ್ಲ್ಯಾಂಟ್ ಅಳವಡಿಕೆಗೆ ಮುನ್ನದ ಪರೀಕ್ಷೆ :

1. ಸಂಬಂಧಿಸಿದ ಮಹಿಳೆಯ ಪೂರ್ಣ ಪರೀಕ್ಷೆ.
2. ತೂಕ, ರಕ್ತ ಒತ್ತಡ, ನಾಡಿ.
3. ಸ್ತನ ಪರೀಕ್ಷೆ.
4. ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಿಂದ ಪೂರ್ಣ ಪರೀಕ್ಷೆ.
5. ಗರ್ಭವಾಗುವಿರುವಿಕೆ ಬಗೆಗೆ.
6. ರಕ್ತ, ಮೂತ್ರ, ಪಿತ್ಥಕೋಶ.

c) ನಾರ್‌ಪ್ಲ್ಯಾಂಟ್‌ಅನ್ನು ತುರ್ತಾಗಿ ತೆಗೆಯಬೇಕಾದದ್ದು :

1. ಏನೇ ದುಷ್ಪರಿಣಾಮದ ಚಿಹ್ನೆ ಕಂಡು ಬಂದಾಗ.
2. ದೃಷ್ಟಿದೋಷ ಕಂಡರೆ.
3. ಅಧಿಕ ರಕ್ತದ ಒತ್ತಡ.
4. ಅವ್ಯವಸ್ಥಿತ ರಕ್ತಸ್ರಾವ ಮತ್ತು ಕಿಬ್ಬೊಟ್ಟೆ ನೋವು.

ಕ್ಯಾನ್ಸರ್ ಬಂದಿರುವುದು ಪತ್ತೆಯಾಗಿದೆ. ಇದು 30ರಲ್ಲಿ 5 ಎಂದು ಹೇಳಲಾಗಿದೆ. ಮತ್ತೊಂದು ಗಮನಾರ್ಹ ಅಂಶವೆಂದರೆ ಈ ಹಾರ್ಮೋನನ್ನು ಇಲಿಗಳ ಮೇಲೆ ಪ್ರಯೋಗಿಸಿದಾಗ ಅವುಗಳ ಮರಿಗಳು ಹೆಣ್ಣಾಗಿ ಹುಟ್ಟಿದರೂ ಲೈಂಗಿಕಾಂಗದ ಹೊರಭಾಗ ಪುರುಷ ಇಲಿಯದಾಗಿತ್ತು,

ನಾರ್‌ಪ್ಲ್ಯಾಂಟ್‌ನ ಲೆವೆನೊಜೆಸ್ಟ್ರಿರಲ್ ಅಂಶವು ಸ್ತನಕ್ಕೆ ಸಾಗುತ್ತದೆ. ಅದು ಎದೆಹಾಲಿನ ಮೂಲಕ ಮಗುವಿಗೂ ತಲುಪುತ್ತದೆ. ನಾರ್‌ಪ್ಲ್ಯಾಂಟ್ ಬಳಸುವವರ ಹೆಣ್ಣು ಮಕ್ಕಳು ಕಡಿಮೆ ತೂಕ ಪಡೆದುಕೊಂಡಿದ್ದು ಕಂಡು ಬಂದಿದೆ. ಇದರರ್ಥ ನ್ಯಾರ್‌ಪ್ಲ್ಯಾಂಟ್ ಹಿರಿಯರ ಮೇಲೆ ಬೀರುವಷ್ಟೇ ದುಷ್ಪರಿಣಾಮ ಮಕ್ಕಳ ಮೇಲೂ ಬೀರುತ್ತದೆ ಎಂಬುದೇ ಆಗಿದೆ.

ನಾರ್‌ಪ್ಲ್ಯಾಂಟ್ ಬಳಕೆ ನಿಲ್ಲಿಸಿದ ಮೇಲೆ ಮತ್ತೆ ಫಲವತ್ತತೆ ಬರುವ ವಿಷಯದಲ್ಲಿ ಇಂದಿಗೂ ಸರಿಯಾದ ಅಧ್ಯಯನ ನಡೆದಿಲ್ಲ. ಇದು ತುಂಬಾ ಮುಖ್ಯ ವಿಷಯ. ನಾರ್‌ಪ್ಲ್ಯಾಂಟ್ ಬಗೆಗೆ ಪ್ರಚಾರ ಮಾಡುವಾಗ ಫಲವತ್ತತೆ ಮರಳುವ ವಿಷಯ ಜನರಿಗೆ ಮನದಟ್ಟು ಮಾಡುವುದು ತೀರಾ ಅಗತ್ಯ. ಈ ದಿಸೆಯಲ್ಲಿ ಯೋಚಿಸುವುದು ಅತ್ಯಗತ್ಯ.

ಪ್ರಸಕ್ತ ಪರಿಸ್ಥಿತಿ

ನಾರ್‌ಪ್ಲ್ಯಾಂಟ್(2) ಬಗೆಗೆ ಎಲ್ಲ ರೀತಿಯ ವೈದ್ಯಕೀಯ ಪರೀಕ್ಷೆ ಪೂರ್ಣಗೊಳಿಸಿರುವುದಾಗಿ ಐಸಿಎಂಆರ್ ಹೇಳಿಕೊಂಡಿದ್ದರೂ ಇದನ್ನು ವಿಶ್ವ ಮಾರುಕಟ್ಟೆಯಿಂದಲೇ ಹಿಂತೆಗೆದುಕೊಂಡಿರುವುದರಿಂದ ಅದನ್ನು ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಅಳವಡಿಸುವುದು ಸಾಧ್ಯವಿಲ್ಲ. ಎಲಾಸ್ಟೋಮಿಪರ್ 382ರ (ತಯಾರಿಕೆ) ಅಭಾವವೇ ವಿಶ್ವ ಮಾರುಕಟ್ಟೆಯಿಂದ ನಾರ್‌ಪ್ಲ್ಯಾಂಟ್(2) ಮಾಯವಾಗಿರುವುದಕ್ಕೆ ಕಾರಣ. ಹೀಗಾಗಿ ನಾರ್‌ಪ್ಲ್ಯಾಂಟ್(ಆರ್)ಅನ್ನು ಕುಟುಂಬ ಕಲ್ಯಾಣ ಯೋಜನೆಗೆ ಅಳವಡಿಸೋಣ ಎಂಬುದು ಎಸಿಎಂಆರ್‌ನ ಶಿಫಾರಸು. ನಾರ್‌ಪ್ಲ್ಯಾಂಟ್ (2) ಮತ್ತು (ಆರ್)ನಲ್ಲಿನ ಹಾರ್ಮೋನು ಒಂದೇ ಆಗಿರುವುದಿಂದ ವ್ಯತ್ಯಾಸವೇನೂ ಆಗದು ಎಂದು ಸಂಸ್ಥೆ ವಾದಿಸುತ್ತದೆ. ಆದರೆ ಭಾರತದಲ್ಲಿ ನಾರ್‌ಪ್ಲ್ಯಾಂಟ್(ಆರ್)ನ ವೈದ್ಯಕೀಯ ಪರೀಕ್ಷೆ ಎರಡೇ ಹಂತದಲ್ಲಿ ನಡೆದಿದೆ. ಉಳಿದ ಹಂತಗಳ ಬಗೆಗೆ ಚಕಾರವಿಲ್ಲ. ಆದರೂ ಇದರ ಅಳವಡಿಕೆ ಪ್ರಯತ್ನದಲ್ಲಿ ಸುಮಾರು 200 ಮಹಿಳೆಯರ ದಾಖಲಾತಿಯಾಗಿದೆ ಎನ್ನಲಾಗಿದೆ. ಸಿಬ್ಬಂದಿಗೆ ತರಬೇತಿ ನೀಡಲಾಗಿವೆ. ಇದನ್ನೇ ಅದು ವೈದ್ಯಕೀಯ ಪರೀಕ್ಷೆ ಎಂದು ಹೇಳಿಕೊಳ್ಳುತ್ತದೆ. ಇದರ ನಂತರದ ಅಧ್ಯಯನವೇ ಪರಿಣಾಮದ ಬಗೆಗೆ ತಿಳಿಸಬೇಕಾಗಿದೆ. ಅಲ್ಲಿಯವರೆಗೆ ನಾರ್‌ಪ್ಲ್ಯಾಂಟ್ ವಿಷಯವೆಲ್ಲಾ ಊಹಾಪೋಹ.

★

ನಾನು ದೇಶದ ಮೂಲಭೂತವಾದಿಗಳಂತೆಯೇ ನಿಮ್ಮ ದೇಶದ ಮೂಲಭೂತವಾದಿಗಳನ್ನೂ ದ್ವೇಷಿಸುತ್ತೇನೆ. ಆದರೆ ನಾನು ನನ್ನ ದೇಶವನ್ನು ದ್ವೇಷಿಸುತ್ತೇನೆಂದು ಕ್ಷಣ ಕೂಡ ಭಾವಿಸಬೇಡಿ. ನಾ ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದನ್ನು ಎಂದಿಗೂ ತೊರೆಯುವುದಿಲ್ಲ. ಹಾಗೆಂದು ನಾನು ನನ್ನ ದೇಶದ ತಪ್ಪುಗಳಿಗೆಲ್ಲ ಕುರುಡಾಗಿಲ್ಲ. ಈ ತಪ್ಪುಗಳಿಂದಾಗಿ ನಾ ಬರೆಯುತ್ತೇನೆ. ನಾ ಬರೆಯುವುದು ಮುಲ್ಲಾಗಳಿಗೆ ಹಿಡಿಸುವುದಿಲ್ಲ. ಆದರೆ ನಾನು ಅವರನ್ನು ಸಂಪ್ರೀತಗೊಳಿಸಲು ಬರೆಯುವುದಿಲ್ಲ. ಪರಿವರ್ತನೆಗಾಗಿ ಬರೆಯುತ್ತೇನೆ, ಸ್ತ್ರೀಯರಿಗಾಗಿ ಬರೆಯುತ್ತೇನೆ. ಅವರು ಗಂಡು ಹೆಣ್ಣಿನ ನಡುವೆ ಹಾಕಿದ ಲಕ್ಷ್ಮಣ ರೇಖೆ ದಾಟಲೆಂದು ಬರೆಯುತ್ತೇನೆ. ನಮ್ಮ ಸ್ವತಂತ್ರ ಪಡೆಯಲೆಂದು ಬರೆಯುತ್ತೇನೆ. ನನ್ನ ಬರವಣಿಗೆಯಿಂದಾಗಿ 50,000 ಟಾಕಾಗಳು ನನ್ನ ತಲೆ ಬಯಸುತ್ತಿದ್ದಾರೆ. ನನಗೆ ಗೊತ್ತು, ಒಂದಲ್ಲ, ಒಂದು ದಿನ ನನ್ನ ಕೊಲ್ಲುತ್ತಾರೆ. ಆದರೆ ಅದರ ಚಿಂತೆ ನನಗಿಲ್ಲ. ನಾ ಮುಲ್ಲಾಗಳಿಗೆ ಹೆದರುವುದಿಲ್ಲ, ಅವರು ನನಗೆ ಹೆದರುತ್ತಾರೆ. ನನ್ನ ಲೆಕ್ಕಣಿಯ ಶಕ್ತಿಗೆ ಹೆದರುತ್ತಾರೆ.

('ಲಜ್ಜಾ' ಪುಸ್ತಕವನ್ನು ಬರೆದ ಕಾರಣಕ್ಕೆ ತಲೆ ದಂಡ ಹೊತ್ತ ಬಾಂಗ್ಲಾ ದೇಶದ ಲೇಖಕಿ ತಸ್ಲೀಮಾ ನಸ್ರೀನ್, ಇಷ್ಟೊಂದು ದಿಟ್ಟತನದಿಂದ ಮಾತನಾಡಿದರೂ ನಂತರ ತಪ್ಪೊಪ್ಪಿಕೊಳ್ಳುವಂತೆ ಅವಳನ್ನು ಒತ್ತಾಯಿಸಿದ ಶಕ್ತಿಗಳ ಕ್ರೌರ್ಯ ಮತ್ತು ಅಧಿಕಾರ ಯಾರ ಊಹೆಗೂ ನಿಲುಕದು.)

ವಿಜ್ಞಾನ ಸರಹದ್ದು

ಮಹಿಳೆಯರು ದೀರ್ಘಾಯುಷಿಗಳೇಕೆ ?

★ ನೇಮಿಚಂದ್ರ

ಮಹಿಳೆಯರು ಪುರುಷರಿಗಿಂತ ದೀರ್ಘಾಯುಷಿಗಳೆಂದು ಗೊತ್ತೆ ? ಪಾಶ್ಚಾತ್ಯ ದೇಶಗಳ ಅಂಕಿ ಸಂಖ್ಯೆಯು ಪ್ರಕಾರ ಹೆಣ್ಣು, ಗಂಡಿಗಿಂತ ಸರಾಸರಿ 9 ವರ್ಷ ಹೆಚ್ಚು ಬದುಕುತ್ತಾಳೆ. ವಿಶ್ವದ ಎಲ್ಲಾ ಮೂಲೆಗಳಲ್ಲೂ ಹೆಣ್ಣು ಗಂಡಿಗಿಂತ ಹೆಚ್ಚು ಕಾಲ ಬದುಕುತ್ತಿದ್ದಾಳೆ.

ಬದುಕಿನ ಓಟದಲ್ಲಿ ಸರ್ವ ಅನುಕೂಲಗಳನ್ನು ಪಡಕೊಂಡ ಗಂಡು, ಸಾವಿನ ಬಾಗಿಲಲ್ಲಿ ಎಡವಿ ಮುಗ್ಗರಿಸುವುದೇಕೆ ಎಂದು ವಿಜ್ಞಾನಿಗಳು, ಸಮಾಜ ಶಾಸ್ತ್ರಜ್ಞರು ಒಟ್ಟಿಗೇ ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ಪ್ರಕೃತಿ ಎಲ್ಲೋ ಹೆಣ್ಣಿನ ಪರ ಪಕ್ಷಪಾತಿಯಾಗಿದೆ ಎಂಬ ಗುಮಾನಿ ಕೂಡಾ ಇವರಿಗೆ ಉಂಟು. ಎಲ್ಲೋ ಗಂಡು ಲಿಂಗದಲ್ಲಿಯೇ ಮೂಲಭೂತ ಕೊರತೆ ಇರಬಹುದು ಎಂಬುದು ವಿಜ್ಞಾನಿಗಳ ಅನುಮಾನ. ಮನುಷ್ಯನನ್ನು ಬಿಡಿ, ಪ್ರಾಣಿಗಳಲ್ಲೂ, ಸಸ್ತನಿಗಳಾಗಲಿ, ಹಕ್ಕಿಗಳಾಗಲಿ, ಸರೀಸೃಪಗಳಾಗಲಿ, ಮೀನುಗಳೂ ಸೇರಿದಂತೆ, ಕ್ರಿಮಿ ಕೀಟಗಳಲ್ಲೂ 'ಗಂಡು' ಜೀವ ಹಿಂದುಳಿದಿದೆ. ಇದು ಸೋಜಿಗವಲ್ಲದೆ ಮತ್ತೇನು ? ಸಾಲದಕ್ಕೆ, ಮನುಷ್ಯರಲ್ಲಿ, ಸಾವಿನ ಕಾರಣಗಳನ್ನು ಕಲೆ ಹಾಕಿದಾಗ, ಹೃದ್ರೋಗ, ಕ್ಯಾನ್ಸರ್ ಮುಂತಾದುವುಗಳಿಂದ ಸಾಯುವವರಲ್ಲಿ, ಪುರುಷರೇ ಮುಂದಿದ್ದಾರೆ. ಹಾಗೆ ನೋಡಿದರೆ ಗರ್ಭ ತಳೆಯುವ ಹೆಣ್ಣು ಭ್ರೂಣಗಳಿಗಿಂತ ಗಂಡು ಭ್ರೂಣಗಳ ಸಂಖ್ಯೆಯೇ ಹೆಚ್ಚು. ಆದರೆ ಸಹಜ ಗರ್ಭಪಾತದಲ್ಲಿ ಹಾಗೂ ಹುಟ್ಟಿನ ಸಮಯದಲ್ಲಿ ಗಂಡು ಭ್ರೂಣಗಳೇ ಹೆಚ್ಚು ಸಾವನ್ನಪ್ಪುತ್ತವೆ.

ವಿಜ್ಞಾನಿಗಳು, ವಂಶವಾಹಿನಿಗಳನ್ನು ಅಧ್ಯಯಿಸಿ ಇಂಥಾ ಅಸಮಾನತೆಯನ್ನು ವಿವರಿಸಲು ಹೆಣಗಿದ್ದಾರೆ. ಸಸ್ತನಿ ಪ್ರಾಣಿಗಳಲ್ಲಿ ಹೆಣ್ಣು ಎರಡು X ವರ್ಣತಂತುಗಳನ್ನು ಪಡೆದಿದ್ದರೆ, ಗಂಡು ಕೇವಲ ಒಂದು X ವರ್ಣತಂತುವನ್ನು ಪಡೆದಿರುತ್ತಾನೆ. ಹೆಣ್ಣಿನಲ್ಲಿ ಒಂದು X ವರ್ಣತಂತುವಿಗೆ ಏನಾದರೂ ಆಪತ್ತು ಒದಗಿದರೂ ಚಿಂತೆ ಇಲ್ಲ. ಕಾರಣ ಮತ್ತೊಂದು ವರ್ಣತಂತು ಹೆಚ್ಚಿಗಿದೆ. ಆದರೆ, ಗಂಡಿನಲ್ಲಿ ಇಂಥಾ ಹೆಚ್ಚುವರಿ X ವರ್ಣತಂತ್ರುವಿಲ್ಲ. ಹಾಗೆಂದೇ X ವರ್ಣತಂತುವಿನ ಲೋಪದಿಂದ ಬರುವ 'ಹೀಮೋಫೀಲಿಯಾ'ದಂಥಹ ಭಯಂಕರ ರೋಗಗಳಿಗೆ ಗಂಡು ಮುಖ್ಯವಾಗಿ ಗುರಿಯಾಗುತ್ತಾನೆ. ಎಲ್ಲಿಯೋ X ವರ್ಣತಂತುವಿನ ಲೋಪ ಅತ್ಯಂತ ಸೂಕ್ಷ್ಮವಾಗಿ ರೋಗಗಳಿಗೆ ಕಾರಣವಾಗಿದೆ ಎಂದು ವಿಜ್ಞಾನಿಗಳು ಅನುಮಾನ ಪಡುತ್ತಿದ್ದಾರೆ.

ಇಷ್ಟು ಸಾಲದೆಂದು ಗಂಡಸರ ವೃಷಣಗಳು ಅವರ ಆರೋಗ್ಯಕ್ಕೆ ಘಾತಕವಾಗಿರುವ ಕುತೂಹಲಕಾರಿ ವಿಷಯವೂ ಹೊರಬಿದ್ದಿದೆ. ಈ ಶತಮಾನದ ಆದಿಯಲ್ಲಿ ಕ್ಯಾನ್ಸಾಸ್ ಹುಚ್ಚಾಸ್ಪತ್ರೆಯಲ್ಲಿ, ಅಲ್ಲಿಯ ಮಾನಸಿಕ ರೋಗಿಗಳ ಉದ್ರಿಕ್ತ ವರ್ತನೆಯನ್ನು ತಡೆಗಟ್ಟಲೆಂದು ಅವರ ವೃಷಣಗಳನ್ನು ವೃಥಾ ತುಂಡರಿಸಿದ್ದರು. ವಿಚಿತ್ರವೆಂದರೆ ವೃಷಣಗಳನ್ನು ಕಳಕೊಂಡ ಇಂಥಾ ಗಂಡಸರು ಸಾಮಾನ್ಯ ಗಂಡಸರಿಗಿಂತ ಸರಾಸರಿ 13 ವರ್ಷ ಹೆಚ್ಚಿಗೆ ಬದುಕಿದರು. ಎಲ್ಲಿಯೋ ವೃಷಣಗಳೊಡನೆ ಗಂಡಿನ ಆಯುಷ್ಯ ಖೋತಾ ಆಗುತ್ತಿದೆ ಎಂದು ಸಂಶೋಧನೆಗಿಳಿದ ಉತ್ತರ ಕ್ಯಾರೋಲಿನ್ನಿನ ಇಬ್ಬರು ವೈದ್ಯರು, ಗಂಡು ಹಾರ್ಮೋನುಗಳು ವೃಷಣದಲ್ಲಿ ಉತ್ಪನ್ನವಾಗುತ್ತವೆ. ಈ ಗಂಡು ಹಾರ್ಮೋನುಗಳು ಹೃದ್ರೋಗಕ್ಕೆ ಕಾರಣವಾಗುವ 'ಕೆಟ್ಟ ಕೊಲೆಸ್ಟ್ರಾಲ್'ನ್ನು ರಕ್ತದಲ್ಲಿ ಹೆಚ್ಚಿಸುತ್ತವೆ. ಅದೇ ಹೆಣ್ಣು ಹಾರ್ಮೋನುಗಳು 'ಒಳ್ಳೆಯ ಕೊಲೆಸ್ಟ್ರಾಲ್'ಗಳಿಗೆ ಕಾರಣವಾಗಿದೆ ಎನ್ನುತ್ತಾರೆ.

ಆದರೆ ವಿಜ್ಞಾನಿಗಳ ಈ ವಾದ ವಿವರಣೆಯನ್ನು ಎಲ್ಲರೂ ಒಪ್ಪುತ್ತಿಲ್ಲ. ಗಂಡಸರ ಅಂಕಿಅಂಶಗಳಿದ,

(15ನೇ ಪುಟಕ್ಕೆ)

ನುಶು-ಸೋದರಿಯರ ಸ್ನೇಹದ ಕೊಂಡಿ

—ಡಿ. ಗಾಡ್‌ಫ್ರೈ

ಚೀನೀ ಮಹಿಳೆಯರು ಪರಸ್ಪರರಿಗೆ ಸಂದೇಶಗಳನ್ನು ಕಳಿಸುತ್ತಿದ್ದ ಗುಪ್ತಲಿಪಿಯೊಂದು ಪ್ರಾಚೀನ ಚೀನಾದಲ್ಲಿ ಮಹಿಳೆಯರ ಬಾಂಧವ್ಯದ ಬಗ್ಗೆ ಬೆಳಕು ಚೆಲ್ಲುತ್ತದೆ. ಕೇವಲ ಮಹಿಳೆಯರಿಗೆ ಮಾತ್ರ ತಿಳಿದಿದ್ದ 'ನುಶು' ಎಂಬ ಈ ಗುಪ್ತಲಿಪಿಯು ಸುಮಾರು ಸಾವಿರ ವರ್ಷಗಳ ಹಿಂದೆ ಮಧ್ಯ ಚೀನಾದ ಹೂನಾನ್ ಪ್ರಾಂತ್ಯದಲ್ಲಿ ರೂಪುಗೊಂಡಿತು. ಮಹಿಳೆಯರು ತಮ್ಮ ಸುಖ ದುಃಖಗಳನ್ನು ತೋಡಿಕೊಳ್ಳಲು, ಸ್ನೇಹವನ್ನು ಬಲಪಡಿಸಲು, ಸಾಹಿತ್ಯಾಭಿರುಚಿಯನ್ನು ವಿನಿಮಯ ಮಾಡಿಕೊಳ್ಳಲು ಮತ್ತು ತಮ್ಮ ಲೇಖನಾ ಸಾಮರ್ಥ್ಯಕ್ಕೆ ಈ ಲಿಪಿಯನ್ನೇ ಬಳಸುತ್ತಿದ್ದರು.

'ನುಶು'ವನ್ನು 1950ರಲ್ಲಿ ಸಂಶೋಧಕ ಜ್ಹೊವ್ ಕುಯೋೇಯಿ ಮತ್ತೆ ಪತ್ತೆಹಚ್ಚಿದರು. ಈ ಲಿಪಿಯಲ್ಲಿದ್ದ ಅನೇಕ ಲೇಖನಗಳ ತುಣುಕುಗಳನ್ನು ಅವರು ಬೀಜಿಂಗ್‌ನ ಭಾಷಾ ಶಾಸ್ತ್ರದ ನಿಯತ ಕಾಲಿಕವೊಂದಕ್ಕೆ ಕಳಿಸಿದರು. ಆದರೆ ಆ ನಂತರ ಸುಮಾರು 30 ವರ್ಷಗಳವರೆಗೆ ಈ ಬಗ್ಗೆ ಯಾವುದೇ ಸಂಶೋಧನೆ ನಡೆಯಲಿಲ್ಲ. ಅನಂತರ ಇತ್ತೀಚೆಗೆ, ಅಂದರೆ ಕಳೆದ ಮೇ ತಿಂಗಳಿನಲ್ಲಿ ನಿವೃತ್ತ ಭಾಷಾಶಾಸ್ತ್ರ ಪ್ರಾಧ್ಯಾಪಕರಾದ ಚೆನ್ ಕಿಗ್ನಾಂಗ್‌ರವರು 600 ನುಶು ಪಠ್ಯಗಳಲ್ಲಿ 400 ಬರಹಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ. ಈ ಸಂಗ್ರಹವು ನುಶು ಅಧ್ಯಯನದ ಬಗ್ಗೆ ಈವರೆಗಿನ ಪ್ರಕಟಣೆಗಳಲ್ಲೇ ಅತ್ಯಂತ ಸಮಗ್ರವಾದದ್ದು ಎನ್ನಲಾಗಿದೆ.

ಚೆನ್‌ರವರ ಈ ಸಂಗ್ರಹದಲ್ಲಿ ಸಮಾರು 100 ವರ್ಷಗಳಿಗೂ ಮೀರಿದ ಅವಧಿಯಲ್ಲಿ ಬರೆದ ಬರಹಗಳಿವೆ. ಇವು ಹುನಾನ್ ಪ್ರಾಂತದಲ್ಲಿ ನಡೆದ ತಾಯ್ ಪಿಂಗ್ ಕ್ರಾಂತಿ ಮತ್ತು ಅಫೀಮು ಯುದ್ಧಗಳಿಂದಾದ ಯಾತನೆಗಳನ್ನು ವಿಶದಪಡಿಸುತ್ತವೆ. ಕಥೆಗಳು, ಜಾನಪದ ಗೀತೆಗಳು ಹಾಗೂ ದಂತಕಥೆಗಳೂ ಇವುಗಳಲ್ಲಿ ಉಂಟು. ಇಲ್ಲಿ ಸಾಮಾನ್ಯವಾಗಿ ಕಂಡುಬರುವ ವಿಷಯವೆಂದರೆ — ವೃದ್ಧಾಪ್ಯದಲ್ಲಿ ನೋಡಿಕೊಳ್ಳುವ ಮಗಂದಿರೂ ಇಲ್ಲದೆ, ಕಿತ್ತು ತಿನ್ನುವ ಒಂಟಿತನದ ನೋವು; ಆ ಕಾಲದ ಕಂದಾಚಾರದ ಸಮಾಜದಲ್ಲಿ ಹೆಣ್ಣಿಗಿದ್ದ ಸ್ಥಾನಮಾನದ ಬಗ್ಗೆ ತಿರಸ್ಕಾರ, ಆಕ್ರೋಶ, ಇತ್ಯಾದಿ. ಪ್ರಾಚೀನ ಚೀನಾದಲ್ಲಿ ಮುಖ್ಯ ದ್ವಾರವಿರಲಿ, ಅಂಗಳದ ಹೊಸಿಲನ್ನೂ ಮಹಿಳೆಯರು ದಾಟುವಂತಿರಲಿಲ್ಲ. 'ಮಹಿಳೆಯರಲ್ಲಿ ಅಜ್ಞಾನವೇ ಆಭರಣ' ಎಂದು ಭಾವಿಸುತ್ತಿದ್ದ ಕಾಲವದು.

ಇಂತಹ ಪರಿಸರದಲ್ಲೂ, ಇಂತಹ ಅಡೆತಡೆಗಳ ನಡುವೆಯೂ ನುಶು ಸಾಮಾಜಿಕ ಸಂಘಟನೆಗೆ ಕೊಂಡಿಯಾಗಿ ಬೆಳೆಯಿತು – ಸಮಾನ ಮನಸ್ಕ ಮಹಿಳೆಯರನ್ನು ಬೆಸೆಯಿತು. ಹೀಗೇ ಭಗಿನೀ ಸಂಘಗಳು ಹುಟ್ಟಿಕೊಂಡವು. ಇಲ್ಲಿ ವರ್ಷದಲ್ಲಿ ಹಲವು ಬಾರಿ ಭೇಟಿಯಾಗುತ್ತಿದ್ದ ಸಮವಯಸ್ಕ ಮಹಿಳೆಯರು ಹಂಚಿಕೊಳ್ಳುತ್ತಿದ್ದುದು ಒಂದೇ ಎರಡೇ ! ? ನೋವು–ನಲಿವು, ಕಾಳು ಬೀಸುವುದು ಮುಂತಾದ ದೈನಂದಿನ ಕೆಲಸಗಳಲ್ಲದೆ ಹೊಲಿಗೆ, ಹೆಣಿಗೆ ಮುಂತಾದ ಕರಕುಶಲ ಕಲೆ. ಈ ಸಭೆಗಳಲ್ಲಿ ಮಹಿಳೆಯರು ಓದುತ್ತಿದ್ದ ಆತ್ಮಕಥೆ, ಕವನಗಳಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಲಾಗುತ್ತಿತ್ತು. ಈ ಕಥೆ, ಕವನಗಳನ್ನು ಬಟ್ಟೆಯ ಹೊದಿಕೆಯುಳ್ಳ ಪುಸ್ತಕಗಳಲ್ಲಿ ದಾಖಲಿಸುತ್ತಿದ್ದರು. ಬರಹಗಳುಳ್ಳ ಬೀಸಣಿಗೆ ಅಥವಾ ಕರವಸ್ತ್ರಗಳನ್ನು ಉಡುಗೊರೆಯಾಗಿಯೂ ವಿನಿಮಯ ಮಾಡಿಕೊಳ್ಳುತ್ತಿದ್ದರು, ಹಬ್ಬ ಹರಿದಿನಗಳಲ್ಲಿ ಇವುಗಳನ್ನು ದೇಗುಲಗಳಲ್ಲಿ ಪ್ರದರ್ಶಿಸುತ್ತಿದ್ದರು.

ಮದುವೆಯಾದ ಮೂರನೇ ದಿನ ವಧುವಿಗೆ ಶುಭ ಕೋರಲು ಬರುತ್ತಿದ್ದ ಅವಳ ಗೆಳತಿಯರು ನುಶು ಬರಹಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಊಳಿಗ ಪದ್ಧತಿ ಪ್ರಧಾನವಾಗಿದ್ದ ಆ ಕಾಲದಲ್ಲಿನ ಮಹಿಳೆಯರ

ಪಾಡನ್ನು ಕೆಲವು ಬರಹಗಳು ಎಳೆ ಎಳೆಯಾಗಿ ಬಿಡಿಸಿದರೆ, ಕೆಲವು, ಮದುವೆಗೆ ಮುಂಚಿನ ಗೆಳತಿಯರೊಡನೆ ನಕ್ಕು ನಲಿದ ಸಂದರ್ಭಗಳನ್ನು ಉಣಬಡಿಸುತ್ತಿದ್ದವು.

ಕೆಲ ಸಂಶೋಧಕರ ಪ್ರಕಾರ ನುಶುವು ಕ್ರಿಸ್ತಪೂರ್ವ 11–17ರ ಶತಮಾನದ "ಒರಾಕಲ್ ಬೋನ್" ಶಿಲಾ ಲೇಖನದ ಲಕ್ಷಣಗಳನ್ನು ಹೊಂದಿರುವುದರಿಂದ, ಅದು 4000 ವರ್ಷಗಳಷ್ಟು ಹಳೆಯದಿರಬಹುದು. ಅವರ ಪ್ರಕಾರ ಕ್ರಿ. ಪೂ. 3ನೇ ಶತಮಾನದಲ್ಲಿ ಚಕ್ರವರ್ತಿ ಕ್ವಿನ್ ಶುಹುವಾಂಗ್ ದೇಶಾದ್ಯಂತ ಏಕರೂಪದ ಲಿಪಿಯನ್ನು ಜಾರಿಗೆ ತಂದ. ಆಗ ಹೊರ ಜಗತ್ತಿನಲ್ಲಿ ಅದಕ್ಕಿದ್ದ ಮಾನ್ಯತೆಯಿಂದಾಗಿ, ವ್ಯಾವಹಾರಿಕ ಕಾರಣಗಳಿಗಾಗಿ ಪುರುಷ ಸಮಾಜವು, ಹೊಸ ಲಿಪಿಯನ್ನು ಸಂಪೂರ್ಣ ಅಳವಡಿಸಿಕೊಂಡಿತು.

ಆದರೆ ಪ್ರಾಧ್ಯಾಪಕ ಚೆನ್ ಈ ವಾದವನ್ನು ಅಲ್ಲಗಳೆಯುತ್ತಾರೆ. ಅವರ ಪ್ರಕಾರ ನುಶುವಿಗೆ ಸಾವಿರ ವರ್ಷಕ್ಕೂ ಮಿರಿದ ಇತಿಹಾಸವಿಲ್ಲ. ಸುಮಾರು 1200 ವರ್ಷಗಳ ಹಿಂದೆ ತಾಂಗ್ ಸಂತತಿಯವರು ಬಳಸುತ್ತಿದ್ದ ಕೈಶು ಲಿಪಿಯ ಅಕ್ಷರಗಳನ್ನೇ ನುಶುವಿನ ಅನೇಕ ಅಕ್ಷರಗಳು ಹೋಲುತ್ತವೆ. ಆಧುನಿಕ ಚೀನೀ ಲಿಪಿಗೂ ಕೈಶುವಿನ ರೇಖಾಕ್ಷರಗಳೇ ಆಧಾರ. ಕೈಶುವಿನ ರೇಖಾಕ್ಷರಗಳಿಗೇ ಕೆಲ ರೇಖೆಗಳನ್ನು ಸೇರಿಸಿ ಅಥವಾ ತೆಗೆದುಹಾಕಿ ಡೊಂಕಾಕೃತಿಯ 'ನುಶು'ವಾಗಿ ಮಾರ್ಪಡಿಸಲಾಗಿದೆ ಎಂಬುದು ಪ್ರಾ. ಚೆನ್‌ರವರ ಅಭಿಪ್ರಾಯ. ನುಶುವಿನ ಬಗ್ಗೆ ಇರುವ ಮತ್ತೊಂದು ವಾದವೆಂದರೆ ಇದನ್ನು ಸೃಜಿಸಿದ್ದು ಹಳ್ಳಿ ಹುಡುಗಿಯೊಬ್ಬಳೆಂದು. ಸಾಂಗ್ ಸಂತತಿಯ ಚಕ್ರವರ್ತಿಯೊಬ್ಬನ ಉಪಪತ್ನಿಯಾಗಬೇಕಾಗಿ ಬಂದ ಈಕೆ ತನ್ನ ಒಂಟಿತನವನ್ನು 'ನುಶು'ವನ್ನು ರೂಪಿಸುತ್ತಾ ಕಳೆದಳಂತೆ. ನುಶು ಕ್ರಾಂತಿಕಾರಿ ರೈತರ ಗುಂಪಿನ ಗುಪ್ತ ಭಾಷೆ ಎಂದೂ ಹೇಳುವವರಿದ್ದಾರೆ. ಪುರುಷರಿಗೆ ನಿಷೇಧಿಸಲ್ಪಟ್ಟ ಇದನ್ನು ಮಹಿಳೆಯರು ಉಪಯೋಗಿಸಿಕೊಂಡರು. ನುಶುವಿನ ಮೂಲವೇನೇ ಇದ್ದರೂ, ಸಾವಿರಾರು ವರ್ಷಗಳ ಕಾಲ ಮಹಿಳೆಯರು ಇದನ್ನು ಪೀಳಿಗೆಯಿಂದ ಪೀಳಿಗೆಗೆ ಪೋಷಿಸಿಕೊಂಡೇ ಬಂದರು. ಆದರೆ 1949ರ ಕ್ರಾಂತಿಯ ನಂತರ ಚೀನೀ ಸಮಾಜದ ಮನೋಭಾವ ಬದಲಾಯಿತು. ಪರಿಣಾಮವಾಗಿ, ಹೆಣ್ಣುಮಕ್ಕಳೂ ಶಾಲೆಗೆ ಹೋಗಲಾರಂಭಿಸಿದರು. ಹಾಗೆಯೇ ನುಶುವಿನ ಬಳಕೆಯೂ ಕ್ರಮೇಣ ಕಡಿಮೆಯಾಗುತ್ತಾ ಹೋಯಿತು.

ನಂತರದ ಸಾಂಸ್ಕೃತಿಕ ಕ್ರಾಂತಿಯಲ್ಲಿ ಹಳೆಯ ಸಮಾಜದ ಪದ್ಧತಿಗಳನ್ನೆಲ್ಲಾ ಕೈಬಿಡಲಾಯಿತು. ನುಶುವನ್ನು ಬಳಸುತ್ತಿದ್ದ ಮುದುಕಿಯರನ್ನು 'ಮಾಟಗಾತಿ'ಯರೆಂದು ಪರಿಗಣಿಸಲಾಯಿತು. ಒಂದು ಕಾಲದಲ್ಲಿ ನೊಂದ ಮನಗಳನ್ನು ಬೆಸೆದಿದ್ದ ನುಶುವಿಗೆ ಅವರ ಆಸೆ ಆಕಾಂಕ್ಷೆ, ಅನಿಸಿಕೆಗಳಿಗೆ ರೂಪು ನೀಡಿದ್ದ ನುಶುವಿಗೆ "ಅನಿಷ್ಟ" ಎಂಬ ಸಂಕೋಲೆ ತೊಡಿಸಲಾಯಿತು. ಹೀಗೆಯೇ ನುಶು ನಶಿಸಿತು.

★ ಸಂಗ್ರಹಾನುವಾದ –ಹೆಚ್. ಎನ್. ಗೀತಾ

ಚಂದಾ ನವೀಕರಿಸಿ

ಜನವರಿ 1994ರ ಸಂಚಿಕೆಗೆ ಈ ವರ್ಷದ 'ಅಚಲ' ಚಂದಾ ಮುಗಿಯುತ್ತದೆ. ದಯವಿಟ್ಟು ಪತ್ರಿಕೆಯ ಚಂದಾವನ್ನು ನವೀಕರಿಸಿ, ಪತ್ರಿಕೆಯ ಬೆಳವಣಿಗೆಗೆ ಸಹಕರಿಸಿ.

ಸ್ಪಂದನ

ಮೂರು ಹೆರುವ ಹೊರೆ!

★ ನೇಮಿಚಂದ್ರ

ವಿಶ್ವದ ಜನಸಂಖ್ಯೆ ಇದೀಗ 54800 ಲಕ್ಷವಿದೆ. ಇಂದು ಪ್ರತಿ ನಿಮಿಷಕ್ಕೆ 180 ಮಕ್ಕಳು ಹುಟ್ಟುತ್ತಿದ್ದಾರೆ. ನಿಜ, 1991ರ ಎಣಿಕೆಯ ಪ್ರಕಾರ ಚೀನಾ ದೇಶ ತನ್ನ 11513 ಲಕ್ಷ ಜನಸಂಖ್ಯೆಯೊಂದಿಗೆ ಜಗತ್ತಿನ ಅತ್ಯಂತ ಹೆಚ್ಚಿನ ಜನಸಂಖ್ಯೆಯ ದೇಶವೆನಿಸಿತು. ಆದರೆ ಭಾರತ ಏನೂ ಹಿಂದಿಲ್ಲ, 8712 ಲಕ್ಷ ಜನರೊಂದಿಗೆ ಮುಂದುವರೆದು, ಕುಟುಂಬ ಯೋಜನಾ ಘೋಷಣೆಗಳ ನಡುವೆಯೇ ಹೇರಳವಾಗಿ ಹೆತ್ತು, 2050ರ ಹೊತ್ತಿಗೆ ಚೀನಾವನ್ನೂ ಹಿಂದೆ ಹಾಕಿ, ಜಗತ್ತಿನ ಅತ್ಯಂತ ಘನ ಸಂಖ್ಯೆಯ ದೇಶವಾಗಲಿದೆ. ಈ ಏರುತ್ತಿರುವ ಜನಸಂಖ್ಯೆಗೆ ಬ್ರೇಕ್ ಹಾಕಬೇಕಾದ್ದು ಪ್ರತಿಯೊಬ್ಬನ ಕರ್ತವ್ಯ. ಆದರೆ ನಮ್ಮ ಸರ್ಕಾರ ಜನಸಂಖ್ಯೆ ಕೇವಲ ಹೆಂಗಸರಿಂದಲೇ ಹೆಚ್ಚುತ್ತಿದೆ. ಅವರನ್ನಷ್ಟೆ ಹಿಡಿದು ಕುಕ್ಕಬೇಕೆಂದು ಭಾವಿಸಿದಂತಿದೆ.

1973ರ ಹೆರಿಗೆ ರಜೆಯನ್ನು ಕುರಿತ ಕಾಯಿದೆಯಲ್ಲಿ ತಿದ್ದುಪಡಿ ತರಬೇಕೆಂದು ಲೇಬರ್ ಮಿನಿಸ್ಟ್ರಿ ಹೊರಟಿದೆ. ಇದರ ಪ್ರಕಾರ ಸರ್ಕಾರ ನಡೆಸದ ಕಾರ್ಖಾನೆಗಳಲ್ಲಿ, ಅಂಗಡಿಗಳಲ್ಲಿ, ಗಣಿಗಳಲ್ಲಿ ದುಡಿವ ಮಹಿಳೆ, ತನ್ನದೇ ರಜೆಯನ್ನು ಬಳಸಿಕೊಳ್ಳಬೇಕು, ಹಾಗೂ ಕೆಲಸ ಕಳೆದುಕೊಳ್ಳುವ ಸಾಧ್ಯತೆಗಳು ಸಿದ್ಧವಿರಬೇಕು. ಸರ್ಕಾರ ಆಕೆಯ ಕೆಲಸವನ್ನು ಉಳಿಸಿಕೊಡುವ ಆಶ್ವಾಸನೆಯನ್ನೇನೋ ಕೊಡುತ್ತಿದೆ.

ಜೂನ್ 1988ರಿಂದಲೇ ಸರಕಾರಿ ಕೆಲಸಗಾರರಿಗೆ ಮೂರನೆ ಬಾರಿ ಹೆರಿಗೆ ರಜೆ ನಿಲ್ಲಿಸಲಾಗಿತ್ತು. ಅಂಥಾ ಒಂದು ಕಾಯಿದೆ ಸದ್ದಿಲ್ಲದೆ ಜಾರಿಗೆ ಬಂದಾಗಿದೆ. ಈಗ ಸರಕಾರಿ ನೌಕರಿಯಲ್ಲಿಲ್ಲದ ಹೆಂಗಸರನ್ನೂ ಒಳಪಡಿಸುವ ಯತ್ನ ನಡೆದಿದೆ.

ಮೇಲು ನೋಟಕ್ಕೆ ದುಡಿವ ಮಹಿಳೆಗೆ ಮೂರನೆ ಹೆರಿಗೆ ರಜೆ ಇಲ್ಲ ಎಂಬುದು ಜನಸಂಖ್ಯೆಯ ನಿಯಂತ್ರಣಕ್ಕೆ ಅನಿವಾರ್ಯವಾಗಿ ಕಾಣಬಹುದು. ವಿದ್ಯಾವಂತ ಮಧ್ಯಮವರ್ಗದ ಜನಕ್ಕೆ ಮಿತಸಂತಾನದ ದೃಷ್ಟಿಯಲ್ಲಿ 'ಸರಿ' ಎನಿಸಿಯೂ ಬಿಡಬಹುದು. ಆದರೆ ಇಂಥಾ ಕಾಯಿದೆಗಳ ಹಿನ್ನೆಲೆಯಲ್ಲಿ ಅಡಗಿರುವ ಅಪ್ಪಟ ಪಿತೃಪ್ರಧಾನ ಧೋರಣೆ, ಸ್ತ್ರೀ ಸ್ವಾಸ್ಥ್ಯದತ್ತಲ ನಿರ್ಲಕ್ಷ ತಟ್ಟನೆ ಕಾಣುವುದಿಲ್ಲ.

ನಿಜ, ನಮ್ಮ ಜನಸಂಖ್ಯೆ ಹಿಗ್ಗಿ ಭೂಮಿ ಸಾಕಾಗದಾಗಿದೆ. ಚೀನಾದಲ್ಲಾಗಲೇ ಜನಸಂಖ್ಯೆ ನಿಯಂತ್ರಣಕ್ಕೆ ಬಂದಿದ್ದು, ಭಾರತವೊಂದೇ ಭಾರವಾಗುತ್ತಿದೆ. ಆದರೆ ಕುಟುಂಬ ಯೋಜನೆ ಕೇವಲ ಹೆಣ್ಣಿನ ಜವಾಬ್ದಾರಿಯಲ್ಲ, ಜನಸಂಖ್ಯೆ ಕೇವಲ ಹೆಣ್ಣಿನ ಸಮಸ್ಯೆಯಲ್ಲ. ಆದಾಗಲೇ ಕುಟುಂಬ ಯೋಜನೆಯ ಬಹಳಷ್ಟು ಭಾರ ಮಹಿಳೆಯರ ಮೇಲಿದೆ. ಪುರುಷ ಜನನ ನಿಯಂತ್ರಣ ಶಸ್ತ್ರಚಿಕಿತ್ಸೆಗೆ ಹೆದರುವ ಗಂಡಸರು, ಕಾಂಡೋಮ್ ಉಪಯೋಗ ತಮ್ಮ ಸುಖಕ್ಕೆ ಅಡ್ಡ ಬರುತ್ತದೆ ಎಂದು ಭಾವಿಸುವ ಗಂಡಸರೇ ಹೆಚ್ಚಿರುವ ನಮ್ಮ ದೇಶದಲ್ಲಿ, ಹೆಣ್ಣು ಕುಟುಂಬ ಯೋಜನೆಯ ಬಹಳಷ್ಟು ಹೊಣೆಗಾರಿಕೆಯನ್ನು ಹೊರಬೇಕಿದೆ. ಇಂಥಾ ಸ್ಥಿತಿಯಲ್ಲಿ ಇದೀಗ ಮೂರನೇ ಹೆರಿಗೆ ರಜೆಯನ್ನು ನಿರಾಕರಿಸುವುದು, ಕೇವಲ ಹೆಣ್ಣಿನ ಮೇಲೆ ಭಾರ ಹೇರುತ್ತದೆ.

ಗಮನಿಸಬೇಕಾದದ್ದು ಜನಸಂಖ್ಯೆ ಗಂಡು ಹೆಣ್ಣು ಎಲ್ಲರನ್ನೂ ಸೇರಿದ ನಮ್ಮೆಲ್ಲರ ಕಳಕಳಿಯಾಗಬೇಕು. ಅದರ ನಿಯಂತ್ರಣಕ್ಕೆ ಒಟ್ಟು ಸಮಾಜದ ಹೊಣೆಗಾರಿಕೆಯಿರಬೇಕು, ಈ ಜನಸಂಖ್ಯೆಯನ್ನು ಏರಿಸುವ ಮಹಿಳೆಯರನ್ನು 'ಶಿಕ್ಷಿ'ಸುವುದಾದರೆ, ಅಂತಹ ಪುರುಷರಿಗೂ ಸಮಾನ ದಂಡ ಇರಬೇಕು. ಭಾರತದಲ್ಲಿ ಶಿಕ್ಷಿತ ಮಹಿಳೆಯರು ಕಡಮೆ ಸಂಖ್ಯೆಯಲ್ಲಿದ್ದಾರೆ. ಇನ್ನು ದುಡಿವ ಮಹಿಳೆಯರ ಸಂಖ್ಯೆಯನ್ನು ಊಹಿಸಬಹುದು. ಮಹಿಳೆಯರ ಮೇಲೆ ಮಾತ್ರ ಮೂರು ಹೆತ್ತ ಅಪರಾಧದ ಹೊರೆ ಹೊರಿಸುವುದೇಕೆ ? ಮೂರು ಮಕ್ಕಳ ಪಡೆದ ಪ್ರತಿ ಪುರುಷನಿಗೂ ದಂಡ ಇರಬೇಕಾದ ಅಗತ್ಯವಿದೆ. ಆಗ ಬಹುಶಃ ನಮ್ಮ ಜನಸಂಖ್ಯೆ ನಿಯಂತ್ರಣಕ್ಕೆ ಬರಬಲ್ಲದು. ಕೆಲವು ಕಾರ್ಖಾನೆಗಳಲ್ಲಿ ಸಂತಾನ ನಿಯಂತ್ರಣ

ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ಒಂದು ಇನ್ಕ್ರಿಮೆಂಟ್ ಕೊಡುವ ರೂಢಿಯಿದೆ. ಬಹುಶಃ ಮೂರು ಹೆರುವ ಪ್ರತಿ ಉದ್ಯೋಗಿಗೆ ಒಂದು ಇನ್ಕ್ರಿಮೆಂಟ್ ಕತ್ತರಿಸುವ ರೂಢಿ ಜನಸಂಖ್ಯೆಯತ್ತ ಒಂದಿಷ್ಟು ಕಾಳಜಿ ತರಬಲ್ಲದೇನೋ.

ಜೊತೆಗೆ ಹೆಣ್ಣು ದೈಹಿಕ ಅನಿವಾರ್ಯತೆಯಲ್ಲಿ ಹೆರುತ್ತಾಳಾದರೂ, ಮಕ್ಕಳು ಕೇವಲ ಹೆಣ್ಣಿನ ಅವಶ್ಯಕತೆಯಲ್ಲ, ಅದು ಗಂಡು–ಹೆಣ್ಣು–ಕುಟುಂಬ–ಸಮಾಜ ಎಲ್ಲರ ಅಗತ್ಯ. ಒಂದು ಕ್ಷಣ ಕಲ್ಪಿಸಿ, ಪ್ರತಿ ಹೆಣ್ಣು ಹೆರಲು ನಿರಾಕರಿಸಿದರೆ, ಆ ಸ್ಥಿತಿಯನ್ನು ಊಹಿಸಬಲ್ಲಿರಾ ? ಮನುಷ್ಯಕುಲವೇ ಕ್ಷಣದಲ್ಲಿ ಅಳಿದು ಹೋಗಬಲ್ಲದು. ಹೆಣ್ಣಿನ ಹೆರುವ ಪ್ರಕ್ರಿಯೆಯನ್ನು ಹೆಚ್ಚು ಗೌರವದಿಂದ ಅನುಕಂಪದಿಂದ ಸಹಾನುಭೂತಿಯಿಂದ ನೋಡಬೇಕಿದೆ. ಅಷ್ಟಲ್ಲದೆ, ಮೂರು ಹೆರುವ ಬಯಕೆ ಅಥವಾ ಆಯ್ಕೆ ಕೇವಲ ಹೆಣ್ಣಿನದಾಗಿರುವುದಿಲ್ಲ, ಹೆರುವ ಅನಿವಾರ್ಯತೆ ಅವಳೊಬ್ಬಳದೇ ಆಗಿದ್ದರೂ. ಗಂಡನ ಬಯಕೆ, ಅತ್ತೆಯ ಒತ್ತಾಯ, ಒಟ್ಟು ಸಮಾಜದ ಧೋರಣೆ, ಪೂರ್ವಾಗ್ರಹಗಳನ್ನು ಒಟ್ಟಿಗೇ ಹೆಣ್ಣು ಹೊರುತ್ತಾಳೆ. ಗಂಡು ಮಗುವನ್ನು ಕುರಿತ ಒತ್ತು, ಬಡತನ, ಅಭದ್ರತೆಯ ಭಾವ ಕೂಡಾ ಇದಕ್ಕೆ ಕಾರಣವಾಗಿದೆ. ಪರಿಣಾಮವನ್ನು ಹೆಣ್ಣು ಹೊರುತ್ತಾಳಾದರೂ, ಅವಳ ಬಸಿರು ಅವಳೊಬ್ಬಳ ಅಗತ್ಯದ್ದಲ್ಲ, ಆಯ್ಕೆಯದಲ್ಲ ಎಂಬುದನ್ನು ಮರೆಯಬಾರದು. ಸಣ್ಣ ಊರು, ಹಳ್ಳಿಗಳಲ್ಲಿ ಆಸ್ಪತ್ರೆಗಳ ಅನುಕೂಲ ಹೆಚ್ಚಿಲ್ಲದಲ್ಲಿ, ಹುಟ್ಟಿದ ಮಕ್ಕಳೆಲ್ಲ ಉಳಿಯದ ಸಾಧ್ಯತೆಯಲ್ಲಿ ಹೆಚ್ಚು ಹೆರುವ ಒತ್ತಡಗಳಿರುತ್ತವೆ.

ಇಂಥಾ ಪರಿಸ್ಥಿತಿಯಲ್ಲಿ, ಹೆಣ್ಣಿನ ದುಡಿಮೆಯ ಮೇಲೆ ನಿಂತ ಕೆಳ ಮಧ್ಯಮ ವರ್ಗ ಹಾಗೂ ಕೆಳ ವರ್ಗ, ಹೆಣ್ಣಿಗೆ ಮೂರು ಹೆರುವ ಭಾರದೊಡನೆ, ಹೆರಿಗೆ ರಜೆಯ ವಿಶ್ರಾಂತಿಯಿಲ್ಲದೆ ದುಡಿಯಲು ದಬ್ಬುವ ಸಾಧ್ಯತೆಯಿದೆ. ಸ್ತ್ರೀ ಮತ್ತು ಮಗುವಿನ ಆರೋಗ್ಯಕ್ಕೆ ಇದು ಮಾರಕವಾಗಬಲ್ಲದು. ನಿಜವಾದ ಅರ್ಥದಲ್ಲಿ ಸ್ತ್ರೀ ಶಿಕ್ಷಣ, ಜಾಗೃತಿ ಆಗದೆ, ಕೇವಲ ಹೊರ ಒತ್ತಡದಿಂದ ಅವರನ್ನು ಮೂರು ಹಡೆಯದಂತೆ ತಡೆಯಲಾಗದು.

ನಿಜ, ಇಂದಿನ ವೇಗದ ಸ್ಪರ್ಧಾತ್ಮಕ ದುಡಿಮೆಯ ರಂಗದಿಂದ ಇಂಥಾ ಕಾಯಿದೆಗಳನ್ನು ದೂರವಿಡಲು ಕಷ್ಟವಾಗಬಹುದು. ಎಲ್ಲಿಯೋ ಮಹಿಳೆ, ತನ್ನ ಬದುಕಿನ ಆಯ್ಕೆಯನ್ನು ಕೈಗೊಳ್ಳುವಷ್ಟು ಪ್ರಬುದ್ಧಳಾಗುವ ಅಗತ್ಯ ಹೆಚ್ಚಾಗುತ್ತಿದೆ. ಇತರರ ಹೇರಿಕೆಗಳನ್ನು ಹೊತ್ತು, ಇತರರ ಆಸೆ ಆಕಾಂಕ್ಷೆಗಳೆದುರು ತನ್ನ ದೈಹಿಕ ಮಾನಸಿಕ ಆರೋಗ್ಯವನ್ನು ತ್ಯಾಗ ಮಾಡುವ ವಿಪರೀತಕ್ಕೆ ಹೋಗದೆ, ಹೆಣ್ಣೋ ಗಂಡೋ ಎರಡು ಸಾಕೆನ್ನುವಷ್ಟು ಗಟ್ಟಿಯಾಗಬೇಕಾಗಿದೆ, ತನ್ನ ಬದುಕಿನ ನಿರ್ಧಾರಗಳನ್ನು ತೆಗೆದುಕೊಳ್ಳುವಷ್ಟು ಸ್ವತಂತ್ರ ಮನೋಭಾವವನ್ನು ಬೆಳೆಸಿಕೊಳ್ಳಬೇಕಾಗಿದೆ. ಆದರೆ ಅಂಥಾ ಒಂದು ಮಹಿಳಾ ಜಾಗೃತಿಯಾಗದೆ, ಇಂಥಾ ಕಾನೂನುಗಳು ಹೊರಬಿದ್ದರೆ, ಮೂರು ಹೆತ್ತ ಮಹಿಳೆ ಮತ್ತು ಮಗುವಿನ ಆರೋಗ್ಯ ತೀವ್ರವಾಗಿ ಹಾನಿಗೊಳ್ಳುವ ಸಾಧ್ಯತೆ ಇದೆ ಎಂಬುದನ್ನು ಮರೆಯಬಾರದು.

★

(11ನೇ ಪುಟದಿಂದ)

ಅಜಾಗರೂಕ ಜೀವನ ಶೈಲಿ ಅವರ ಆಯುಷ್ಯಕ್ಕೆ ಕಂಟಕವಾಗಿದೆ ಎನ್ನುತ್ತಾರೆ ಸಮಾಜಜೀವಶಾಸ್ತ್ರಜ್ಞರು. ಗಂಡಸರು ಹೆಂಗಸರಿಗಿಂತ ಹೆಚ್ಚು ತಿನ್ನುತ್ತಾರೆ, ಇಂದಿನ ಎಲೆಕ್ಟ್ರಾನಿಕ ಯುಗದಲ್ಲಿ ದೈಹಿಕವಾಗಿ ಕಡಮೆ ದುಡಿಯುತ್ತಾರೆ, ಧೂಮ್ರಪಾನ ಮಾಡುವವರಲ್ಲಿ, ಹೆಂಡ ಕುಡಿವವರಲ್ಲಿ ಗಂಡಸರ ಸಂಖ್ಯೆಯೇ ಹೆಚ್ಚು. ಸಾಲದಕ್ಕೆ ಜಗಳ, ಗಲಭೆ, ಕಲಹ, ಕೊಲೆ, ಅಪಘಾತ, ಆತ್ಮಹತ್ಯೆಗಳಲ್ಲಿ ಸಾಯುವವರಲ್ಲಿ ಗಂಡಸರೇ ಹೆಚ್ಚು. ಹೀಗಿರುವಾಗ ಗಂಡಸರು ಹೆಂಗಸರಿಗಿಂತ ಕಡಮೆ ಕಾಲ ಬದುಕುವುದರಲ್ಲೇನು ಆಶ್ಚರ್ಯ ಎನ್ನುತ್ತಿದ್ದಾರೆ.

ಅಂತೂ ಸಾಮಾಜಿಕ ಕಾರಣವೋ, ಜೀವಶಾಸ್ತ್ರೀಯ ಕಾರಣವೋ ಹೆಂಗಸರು ಒಂದಿಷ್ಟು ವರ್ಷ ಹೆಚ್ಚೇ ಬದುಕುತ್ತಾರೆ. ಇಂದಿನ ಸ್ತ್ರೀ ಭ್ರೂಣ ಹತ್ಯೆ, ಹೆಣ್ಣು ಶಿಶುಹತ್ಯೆಯ ನಡುವೆಯೂ ಬದುಕುಳಿದ ಗಟ್ಟಿಗಿತ್ತಿಯರನ್ನು 'ಅಬಲೆ'ಯರು ಎನ್ನುವ ಈ 'ಸಬಲ'ರಿಗೆ ಸಮಾಜಕ್ಕೆ ಏನೆನ್ನಬೇಕು ?

★

ಮುಸ್ಸಂಜೆಯಿಂದ ಮುಂಜಾನೆವರೆಗೆ

ಚೀನಿ ಕತೆ

ಚೀನದ ಪ್ರಮುಖ ಕತೆಗಾರರ ಪಟ್ಟಿಗೆ ಸೇರುವ ಶ್ರೀಮತಿ ಡಿಂಗ್ ಲಿಂಗ್ ಅವರ "ಮಿಸ್ ಸೋಫೀಸ್ ಡೈರಿ" ಮೊದಲು 1928ರಲ್ಲಿ ಪ್ರಕಟಗೊಂಡಾಗ ಇಡೀ ದೇಶದ ಗಮನ ಸೆಳೆಯಿತು. ಸೂಕ್ಷ್ಮಭಾವನೆಗಳನ್ನು ಕತೆಗಳಲ್ಲಿ ಹಿಡಿದಿರುವ ಪ್ರಭಾವಶಾಲಿ ಲೇಖಕಿ ಲಿಂಗ್ ಅವರ ಪ್ರತಿಯೊಂದು ಕತೆ, ಕಾದಂಬರಿಯೂ ಅತ್ಯಂತ ಜನಪ್ರಿಯತೆ ಗಳಿಸಿವೆ. ವಿಮರ್ಶಕರ ಗಮನ ಸೆಳೆದಿವೆ. "ಮಿಸ್ ಸೋಫೀಸ್ ಡೈರಿ ಮತ್ತಿತರ ಕತೆಗಳು" ಸಂಗ್ರಹದಿಂದ ಆಯ್ದುಕೊಂಡಿರುವ "ಮುಸ್ಸಂಜೆಯಿಂದ ಮುಂಜಾನೆವರೆಗೆ" ಕತೆಯು ಹೆಣ್ಣಿನ ಅತಿ ಸೂಕ್ಷ್ಮ ಭಾವನೆಗಳನ್ನು ನವಿರಾಗಿ ಹೇಳುತ್ತದೆ. ಇದು ಡಿಂಗ್ ಲಿಂಗ್ ಅವರ ಆತ್ಮಕತೆ ಎಂದೂ ಹೇಳಲಾಗುತ್ತದೆ.

"ಹುಣ್ಣಿಮೆಯ ರಾತ್ರಿ....ಹೊಳೆವ ನಕ್ಷತ್ರ....ಟ್ರ್ಯಾಮಿನ ಶಬ್ದ....ಬೆನ್ನಿಗೆ ಮಗುವನ್ನು ಕಟ್ಟಿಕೊಂಡಿದ್ದ ಅವಳು, ತಾಯಿ ನಡೆಯುತ್ತಿದ್ದಳು....ಅವಳ ಜೊತೆಗೆ ಮಗುವಿನ ತಂದೆ ಹೆಜ್ಜೆ ಹಾಕುತ್ತಿದ್ದ....ಛೆ! ಇದು ಮೂರ್ಖತನದ ಪರಮಾವಧಿ!"

ರಸ್ತೆ ಉದ್ದಕ್ಕೂ ಒಂಟಿಯಾಗಿ ನಡೆಯುತ್ತಿದ್ದ ಆ ಹೆಣ್ಣು ತನ್ನ ಆಲೋಚನೆಗಳಿಗೆ ತಾನೇ ನಕ್ಕಳು. ತಲೆ ತುಂಬಾ ಚಿಂತೆ, ಅದರಿಂದ ಮುಕ್ತಿ ಹೇಗೆಂದು ತಿಳಿಯದು. ಆದರೂ ತನ್ನ ಮನೆಯತ್ತ ನಡೆಯತೊಡಗಿದಳು.

"ನನ್ನ ಅಣ್ಣ ಸತ್ತ ದಿನ ಇದು. ಎಷ್ಟೋ ವರ್ಷವಾಗಿ ಹೋಯ್ತು... ಅವನನ್ನು ಎಲ್ಲಿ ಹೂಳಿದ್ದರೆಂದೇ ತಿಳಿಯಲಿಲ್ಲ....ಪಾಪ! ಅಮ್ಮನಂತೂ ಇಂದು ದುಃಖದಲ್ಲಿರಬಹುದು. ಇಲ್ಲ....ಇಲ್ಲ. ಪುಟ್ಟ ಪಿಂಗ್ ಅವಳಿಗೆ ಪುರಸೊತ್ತು ನೀಡಿಯಾನೆ? ಹಳೆಯ ನೆನಪಿಗೆ ಅವ ಅಜ್ಜಿಗೆ ಸಮಯ ಎಲ್ಲಿ ಕೊಡುತ್ತಾನೆ? ಆದರೆ....ನಾನ್ಯಾಕೆ ಇದನ್ನೆಲ್ಲಾ ಯೋಚಿಸುತ್ತಿರುವೆ?"

ಒಂದು ರಸ್ತೆ ದಾಟಿದ ಅವಳು ಇನ್ನೂ ನಿರ್ಜನವಾದ ಬೀದಿಗೆ ಬಂದಳು. ಅವಳ ಬೂಟಿನ ಸದ್ದು ಅವಳ ಕಿವಿಗೇ ಅಪ್ಪಳಿಸುತ್ತಿತ್ತು.

"ಅಮ್ಮನ ಪ್ರೀತಿಯ ಪತ್ರ....ಸಂತೋಷ, ಹರ್ಷ ಸೂಸುವ ಪತ್ರ....ನಿನ್ನನ್ನು ಕಂಡರೆ ನನಗೆ ಭಯ....ಆದರೂ ಪುಟ್ಟ ಪಿಂಗನ ತಾಯಿಯಲ್ಲವೆ?"

ತನ್ನ ಹುಚ್ಚು ಯೋಚನೆಗಳಿಗೆ ಕೊನೆಯೇ ಇಲ್ಲವೆ ಎಂದು ಅವಳು ಪ್ರಶ್ನಿಸಿಕೊಂಡಳು. ಅದರ ಮಧ್ಯೆಯೇ ಅವಳು ತನ್ನ ಮನೆ ಇರುವ ಹಾದಿ ತಲುಪಿದ್ದಳು. ಮಠಾರದಂಥ ಮನೆ ಅದು. ಎಣ್ಣೆ ವಾಸನೆ. ಕೆಲ ಮನೆ ಮನೆಗಳಲ್ಲಿ ದೀಪ ಪ್ರಜ್ವಲಿಸುತ್ತಿತ್ತು. ಅಫೀಮಿನ ವಾಸನೆ ಬರುತ್ತಿದ್ದ ಮನೆ ಬಾಗಿಲನ್ನು ಅವಳು ಜೋರಾಗಿ ಬಡಿದಳು. 'ಮಹಡಿ ಮನೆಯಲ್ಲಿ ವಾಸಿಸುವವಳು ನಾನು. ಬೇಗ, ಬಾಗಿಲು ತೆಗಿಯಿರಿ' ಎಂದು ಕೂಗಿದಳು.

ಎಂದಿನಂತೆ ಅಂದೂ ಬಾಗಿಲು ತೆರೆಯಲು ಹೆಚ್ಚು ಸಮಯವೇ ಬೇಕಾಯಿತು. ತೀರಾ ಕೊಳೆಯಾಗಿದ್ದ ಬಟ್ಟೆ ಹಾಗೂ ಕಪ್ಪಿಟ್ಟ ಮುಖದ ಸೇವಕಿ ಬಾಗಿಲು ತೆರೆದಳು. ಒಳಗೆ ನುಗ್ಗಿದ ಅವಳು ಮೂಗು ಮುಚ್ಚಿಕೊಂಡು ಮಹಡಿ ಏರತೊಡಗಿದಳು. ಮಹಡಿ ಮೆಟ್ಟಿಲ ಬಳಿ ನಿಂತ ಆ ಸೇವಕಿ, "ನಿನ್ನನ್ನು ಹುಡುಕಿಕೊಂಡು ಯಾರೋ ಬಂದಿದ್ದರು."

"ಹೌದಾ? ಯಾರದು? ಏನು ಹೇಳಿದರು?"

"ಇಲ್ಲ" ಎಂದು ಮುಖವನ್ನು ಇನ್ನೂ ಕೆಟ್ಟದಾಗಿ ಮಾಡಿದಳಾಕೆ.

"ಅದರಿಂದ ಪ್ರಯೋಜನವೇನು" ಎಂದು ಅವಳು ಮಹಡಿ ಏರಿದಳು.

ಅದು ಮನೆ ಏನೂ ಅಲ್ಲ. ಹೆಚ್ಚು ಕಡಿಮೆ ಖಾಲಿಯಾಗಿದ್ದ ಕೋಣೆಯದು. ದೀಪ ಕಣ್ಣನ್ನು ಚುಚ್ಚುತ್ತಿತ್ತು. ತಲೆಮೇಲೆ ಯಾರೋ ಸುತ್ತಿಗೆಯಿಂದ

ಹೊಡೆಯುತ್ತಿರುವಂತೆ....ತಲೆಸಿಡಿಯುತ್ತಿತ್ತು. ಕೋಣೆ ತುಂಬಾ ಕಣ್ಣು ಹಾಯಿಸಿದಳು. ಕಂಡದ್ದು ಒಂದೇ, ಅತ್ಯಂತ ದುಃಖಿನಿಯಾದ ಹೆಣ್ಣು, ಎಂಥಾ ಬಾಲ್ಯ ಅವಳದು! ಮರೆಯಲಾಗದಂಥ ಏಕಾಂಗಿತನ....ಅವಳಿಗೆ ತಲೆ ಸುತ್ತಲಾರಂಭಿಸಿತು. ತಲೆನೋವು ಹೆಚ್ಚಾಯಿತು. ಕಣ್ಣು ಮುಚ್ಚಿದರೆ ಹೊರಜಗತ್ತನ್ನು ಮರೆಯಬಹುದೆಂಬ ಭಾವನೆ ಮೂಡಿತು. ಆದರೆ ಕಣ್ಣುಮುಚ್ಚಿದ್ದರೂ ಚಿಂತೆ ಮಾತ್ರ ದೂರವಾಗಲಿಲ್ಲ. ತುಂಬಾ ಸುಸ್ತಾಗಿ ಹೋಗಿತ್ತು. ಸಂಜೆ ಪೂರ್ತಿ ಸುತ್ತಾಟ ಸಾಕಾಗಿ ಹೋಗಿತ್ತು. ಯಾಂಗ್‌ಗೆ ಕಂಪನಿ ಕೊಟ್ಟಿದ್ದಳು. ಆದರೆ ಅದರಿಂದ ಆದ ಒಳಿತಾದರೂ ಏನು? "ನಕ್ಷತ್ರಗಳ ಜತೆ ನಾವಿಬ್ಬರೂ ಸೇರಿ ಹೋಗೋಣ" ಎಂಬುದು ಅವನ ಪದ್ಯದ ಸಾಲು. ಅದಕ್ಕೆ ನಾನೇನು ಹೇಳಲಿ? ಅದರರ್ಥ ಹುಡುಕುವ ಪ್ರಯತ್ನ ಮಾಡಬೇಕು. ಅದು ಸಾಧ್ಯ ವಾದೀತೇ?

ಯಾವುದರಿಂದ ನನಗೆ ಆಗಬೇಕಾದುದು ಏನು? ಇಡೀ ಊರು ಸುತ್ತುವೆ. ಯಾವುದೂ ನನ್ನನ್ನು ಪಲ್ಲಟ ಗೊಳಿಸೋದಿಲ್ಲ. ನಾನು ಹಾಗೆಂದು ಏಕೆ ಹೇಳಿಕೊಳ್ಳ ಬೇಕು? ನಾನೇನು ಭಿನ್ನ ವ್ಯಕ್ತಿಯೇ? ಎಲ್ಲರಂತೆ ನಾನಲ್ಲವೆ? ಇದು ಸರಿಯೇ? ಈ ವಾದದಲ್ಲಿ ತಿರುಳಿದೆಯೇ?

ಇದೆಲ್ಲಾ ಹುಚ್ಚು ವಿಚಾರ. ಅವಳ ಭಾವನೆ ಹೆಪ್ಪುಗಟ್ಟಿ ಹೋಗಿತ್ತು. ಆದರೆ ಒಮ್ಮೊಮ್ಮೆ ಪುಟಿ ದೇಳುತ್ತಿತ್ತು. ಹೃದಯ ಕಲಕಿ ನೀರಾಗಿಬಿಡುತ್ತಿತ್ತು. ಆತ್ಮೀಯರ ಬಗೆಗೆ ಹೃದಯ ತುಂಬಿ ಬರುತ್ತಿತ್ತು. ಅವರಿಗಾಗಿ ಏನಾದರೂ ಮಾಡುವ ಅಭಿಲಾಷೆ ಉಕ್ಕಿ ಹರಿಯುತ್ತಿತ್ತು. ಸ್ವತಃ ದುಃಖಿಸಿಯಾದ ಅವಳು ಪರರ ದುಃಖವನ್ನು ಅರ್ಥಮಾಡಿಕೊಳ್ಳಬಲ್ಲವಳಾಗಿದ್ದಳು. ತನ್ನದೇ ಮಗುವನ್ನು ಬೇರೆಡೆ ಬಿಟ್ಟು ಒಂಟಿಯಾಗಿ ಬದುಕುವಂಥ ಪರಿಸ್ಥಿತಿಯಾಗಿತ್ತು, ಅವಳದು. ಬರವಣಿಗೆ ಅವಳಿಗೆ ಈಗ ಉಸಿರಾಗಿಹೋಗಿತ್ತು. ಮಾನವೀಯ ತೆಯೇ ಜೀವನದ ಅಂಗ ಎಂದು ಭಾವಿಸಿದ್ದ ಅವಳಿಗೆ ಅದೇ ಮಾನವೀಯತೆಯ ಅರ್ಥವನ್ನು ಹುಡುಕಿ ಸೋತಿ ದ್ದಳು. ಮಾನವೀಯತೆ ಏಕತಾನವಾದೀತೆ ಎಂಬುದು ಅವಳ ಪ್ರಶ್ನೆ. ಅವಳದೇ ಬದುಕಿನಲ್ಲಿ ಒಂದು ಘಟನೆ ಈ ಇಡೀ ಚಿತ್ರಕ್ಕೆ ಬೇರೆಯದೇ ಅರ್ಥಕೊಟ್ಟು ಬಿಟ್ಟಿತು.

ಯಾವ ದಿನ ಅವಳು ಹೀಗೆ ತನ್ನ ಕೋಣೆಯಲ್ಲಿ ಕುಸಿದು ಕುಳಿತಳೋ ಅದೇ ದಿನ ಸಂಜೆ ಅನಿರೀಕ್ಷಿತವಾಗಿ ಭವ್ಯವಾದ ಸೂಪರ್ ಮಾರ್ಕೆಟ್ ಹೊಕ್ಕಳು. ಯಾಂಗ್ ಜೊತೆಗಿದ್ದ. ಕೊಳ್ಳುವ ತಾಕತ್ತು ಇರಲಿಲ್ಲ. ವಿಭಾಗ ದಿಂದ ವಿಭಾಗಕ್ಕೆ ಹೆಜ್ಜೆ ಹಾಕುತ್ತಿದ್ದಳು. ಮಕ್ಕಳ ಬಟ್ಟೆ ಮಾರಾಟ ಮಾಡುವ ಭಾಗಕ್ಕೆ ಕಾಲು ಎಳೆದು ತಂದಿತು. ಒಂದೊಂದೇ ಉಡುಪನ್ನು ಮುಟ್ಟಿ ಮುಟ್ಟಿ ನೋಡಿದಳು. ಪರ್ಸಿನಲ್ಲಿ ಒಂದು ಡಾಲರ್‌ಗಿಂತ ಸ್ವಲ್ಪ ಹೆಚ್ಚು ಹಣವಿತ್ತು. ಉಡುಪಿನ ಬೆಲೆ ಸಮೀಪ ಕೂಡ ಬರಲಾರದಷ್ಟು, ಅದು. ಹತಾಶಳಾದಳು. ಮಗುವಿನ ಬಗೆಗೆ ಅಮ್ಮ ಬರೆದಿದ್ದಳು. ಅದರ ಆಟವನ್ನು ವರ್ಣಿ ಸಿದ್ದಳು. ಹಣ ಬೇಕೆಂದಿದ್ದಳು....ಹಾಲು ಪುಡಿ ಮುಗಿದು ಹೋಗಿದೆ....ಆದರೂ ಮಕ್ಕಳ ಉಡುಪಿನಿಂದ ಅವಳಿಗೆ ಕಣ್ಣು ತೆಗೆಯಲಾಗಲಿಲ್ಲ. ಪಕ್ಕದಲ್ಲೇ ಹೆಣ್ಣು ಮಕ್ಕಳ ಬಟ್ಟೆಯ ರಾಶಿ. ತಿಳಿಕೆಂಪು ಬಣ್ಣ....ಆಗ ಯಾಂಗ್ ಅವಳ ಬೆನ್ನು ತಿವಿದ. ನೋಡಲ್ಲಿ, ಎಂದ. ಅಲ್ಲೇ ಆ ಯುವತಿ ನಿಂತಿದ್ದಳು. ಸುಂದರಿ ಆಕೆ. ಅವಳ ಕೈ ಮಗುವಿನ ತಿಳಿಕೆಂಪು ಬಣ್ಣದ ಫ್ರಾಕ್ ಮೇಲೆ ಕೈಯಾಡು ತ್ತಿತ್ತು. ಅನುಮಾನವೇ ಇಲ್ಲ. ಅದು ಶ್ರೀಮತಿ ಎಫ್. ಪರಸ್ಪರ ಮುಖದಲ್ಲಿ ಆಶ್ಚರ್ಯ ಮೂಡಿ ಬಂದಿತು. ಆದರೂ ಸಹಜವಾಗಿ ಶ್ರೀಮತಿ ಎಫ್. ಮಾತಾಡಿದಳು "ಓಹ್....ಯಾವ ಯುಗವಾಯ್ತು, ನಿನ್ನನ್ನು ನೋಡಿ...."

ಏನು ಹೇಳುವುದೆಂದೇ ಅವಳಿಗೆ ತಿಳಿಯಲಿಲ್ಲ. "ನೀನು ಚೆನ್ನಾಗಿದ್ದೀಯಾ? ಅದೇ ಸ್ಥಳದಲ್ಲಿ ಇದ್ದೀಯಾ?"

"ನಾವು ಮನೆ ಬದಲಿಸಿಲ್ಲ....ನೀನು ಮಗುವನ್ನು ಅಮ್ಮನ ಬಳಿಗೆ ಕಳುಹಿಸಿದ್ದೀಯಂತೆ...." ಶ್ರೀಮತಿ ಎಫ್. ಅದೇ ಸಹಜ ಧ್ವನಿಯಲ್ಲಿ ಮಾತಾಡಿದಳು.

"ಹೌದು....ಹಾಗೇ ಮಾಡಿದ್ದೇನೆ....ಏನು ಬಟ್ಟೆ ಕೊಳ್ತಾ ಇದ್ದೀರಾ?"

"ಇಲ್ಲಪ್ಪಾ....ಮಗುವಿಗೆ ಹಾಲಿನ ಪುಡಿ...." ಎಂದು ಹೇಳುತ್ತಾ ಶ್ರೀಮತಿ ಎಫ್ ಹಾಲಿನ ಪುಡಿ ಡಬ್ಬ ತೋರಿಸಿದಳು.

ಮನೆಯಿಂದ ಬಂದ ಪತ್ರದಲ್ಲಿ ಹಾಲಿನ ಪುಡಿ ಮುಗಿದಿದೆ ಎಂದು ಬರೆಯಲಾಗಿತ್ತು. "ಮನೆಗೆ ಬನ್ನಿ....

ಮಗುವನ್ನು ಕರೆದುಕೊಂಡು ಬನ್ನಿ" ಎಂದು ತನ್ನ ಆಲೋಚನೆಯನ್ನು ಬದಿಗೊತ್ತಿ ಹೇಳಿದಳು.

"ಖಂಡಿತಾ ಬರ್ತೀನಿ....ಈಗ ಎಲ್ಲಿರ್ತೀಯಾ ?" ಕಷ್ಟ ಪಟ್ಟು ಮನೆ ವಿಳಾಸ ಕೊಟ್ಟಳು. ಶ್ರೀಮತಿ ಎಫ್‌ಗೆ ಅದರ ನೆನಪು ಇರುತ್ತದಾ ಎಂಬ ಆಲೋಚನೆಯೂ ಜತೆಯಾಗೇ ಬಂತು.

"ಗುಡ್ ಬೈ...." ಎಂದು ಶ್ರೀಮತಿ ಎಫ್ ನಡೆದಳು. ಅವಳು ನಿಂತಿದ್ದ ಜಾಗದತ್ತ ನೋಡಿದಳು. ಅವಳು ಆ ಫ್ರಾಕ್ ಕೊಂಡಿರಲಿಲ್ಲ. "ಪಾಪ ! ಅವಳೇಥ ಸುಂದರಿ ಅಂಥ ಮೂರ್ಖ ಗಂಡನನ್ನೇಕೆ ಮದುವೆಯಾದಳೋ" ಎಂದು ಯಾಂಗ್ ಉದ್ಗರಿಸಿದಾಗ, "ಅವರು ಪ್ರೀತಿಸುತ್ತಾರೆ. ಅದೇ ಅವರ ಬದುಕಿನ ಹೆಜ್ಜೆ ಮುಂದಕ್ಕೆ ಹೋಗಲು ಆಧಾರ" ಎಂದು ಅವಳು ಹೇಳಿದಳು. "ಇವೆಲ್ಲಾ ವಿರೋಧಾಭಾಸಗಳೇ" ಎಂದು ಯಾಂಗ್ ಹೇಳಿದಾಗ, ಯಾಂಗ್ ಮಾತೇ ವಿರೋಧಾಭಾಸ ಎಂದು ಅವಳು ಹೇಳಿಕೊಂಡಳು. ತನ್ನದೇ ಅನುಭವ ನೆನಪಾಯಿತು. ಅಂದು ಭಯಂಕರ ಗಾಳಿ. ಜೊತೆಗೆ ಮಳೆ, ತುಂಬಾ ಹತಾಶಳಾಗಿದ್ದಳು. ಒಂಟಿತನ ಕಾಡುತ್ತಿತ್ತು. ಸ್ನೇಹಿತರನ್ನು ಅರಸಿ ಹೋಗುತ್ತಿದ್ದಳು. ಮೂರು ಕಡೆ ಮೂಗು ಮುರಿಸಿ ಕೊಂಡು ಶ್ರೀಮತಿ ಎಫ್ ಮನೆ ಬಳಿಗೆ ಬಂದಳು. ಎರಡನೆ ಮಹಡಿ ಮನೆಯಲ್ಲಿ ದೀಪ ಉರಿಯುತ್ತಿತ್ತು. ದುಃಖದಲ್ಲೂ ಸಂತೋಷ ಅರಳಿತು. ಬಾಗಿಲು ಬಡಿದಳು. ಯಾವುದೇ ಪ್ರತಿಧ್ವನಿ ಇಲ್ಲ. ಹಿಂಬಾಗಿಲಿಗೆ ಹೋದಳು. ಏನೂ ಸದ್ದೇ ಇಲ್ಲ. ಆತಂಕ, ದುಃಖ ತಾಳಲಾರದೆ ರಸ್ತೆಯಲ್ಲಿ ನಿಂತು "ಶ್ರೀಮತಿ ಎಫ್" ಎಂದು ಕೂಗಿದಳು. ಬಹುಶಃ ರಸ್ತೆಯಲ್ಲಿ ಸದ್ದು ಹೆಚ್ಚಾಗಿತ್ತೇನೋ, ಮೇಲಿನ ಕಿಟಕಿ ಒಮ್ಮೆಯೂ ತೆರೆಯಲಿಲ್ಲ. ದಾರಿ ಹೋಕನೊಬ್ಬ ಅವಳ ನೆರವಿಗಾಗಿ ಬಾಗಿಲು ಬಡಿದ. ಅವಳು ಕಿರುಚಿ ಕೊಂಡಳು. ಇದ್ದಕ್ಕಿದಂತೆ ಮನೆ ದೀಪ ಆರಿತು. "ಎಲ್ಲಾ ಮಲಗಿಕೊಂಡಿರಬೇಕು" ಎಂದು ನಿರಾಸೆಯಿಂದ ಹೇಳಿಕೊಂಡಳು. ಮೂವರು ತಬ್ಬಿಕೊಂಡು ಮಲಗಿರ ಬಹುದಾದ ದೃಶ್ಯವನ್ನು ಕಲ್ಪಿಸಿಕೊಂಡಳು ಮತ್ತೊಮ್ಮೆ ಕಿಟಕಿಯತ್ತ ನೋಡಿದಳು. ಖುಷಿಗಾಗಿ ಮುಚ್ಚಿದ್ದ ಕಿಟಕಿ ಕಂಡು ಮತ್ತೊಮ್ಮೆ ಕೂಗುವುದು ಅವಳಿಂದ ಸಾಧ್ಯವಾಗಲಿಲ್ಲ. ದುಃಖಿತಳಾಗಿ ನಿಂತು ತನ್ನ ಮಗುವನ್ನು ನೆನಪು ಮಾಡಿಕೊಂಡಳು. ಆ ಮಗುವನ್ನು ಹುಟ್ಟಿಸಿದಾತ ಎಲ್ಲೋ ಮಾಯವಾಗಿದ್ದ. ಅವಳ ಬದುಕಿಗೆ ಬರೆ ಹಾಕಿ ಹೋಗಿದ್ದ, ಜೀವನಕ್ಕೆ ಕಪ್ಪು ಛಾಯೆ ಮೂಡಿಸಿ ಹೋಗಿದ್ದ, ಎಲ್ಲಿಂದು ತಿಳಿಯದು. ಹಾಗೆಂದೇ ಸ್ನೇಹಿತರನ್ನು ಅರಸಿ ಬಂದಿದ್ದಳು. ಆದರೆ ಇಲ್ಲಿ ನಿರಾಸೆ. ಆದರೂ ಅದು ಅವಳ ಬದುಕಿನ ಗುರಿಯನ್ನು ಒಂದು ರೀತಿ ಇತ್ಯರ್ಥಗೊಳಿಸಿತ್ತು. ಪ್ರೀತಿಸಿದ್ದ ವ್ಯಕ್ತಿಯನ್ನು ಮತ್ತೆ ಭೇಟಿ ಮಾಡಲಾಗದು, ಸಿಹಿ ಸಿಹಿಯಾಗಿದ್ದ ನಾಲ್ಕು ದಿನದ ಸಂತೋಷಮಯ ದಿನಗಳು ಪೂರ್ಣವಾಗಿ ಮಾಯವಾದಂತೆ ಎಂದುಕೊಂಡಳು. ಒಂಟಿ ಬದುಕಿಗೆ ಸಿದ್ಧಳಾಗತೊಡಗಿದಳು....ಮಾನಸಿಕ ಸ್ಥೈರ್ಯ ತುಂಬಿಸಿಕೊಳ್ಳಲಾರಂಭಿಸಿದಳು.

ಅದೆಲ್ಲಾ ಅಂದಿನ ಕತೆ, ಅದು ಶ್ರೀಮತಿ ಎಫ್ ಕಿವಿಗೆ ಖಂಡಿತಾ ತನ್ನ ಕೂಗು ಮುಟ್ಟಲಿಲ್ಲವೆ ಎಂಬ ಪ್ರಶ್ನೆಗೆ ಇಂದಿಗೂ ಉತ್ತರ ಸಿಗದು. ಇಂದು ಮತ್ತೆ ಶ್ರೀಮತಿ ಎಫ್ ದರ್ಶನ. ಅದೇ ಯೌವನ, ಸುಂದರ ಮುಖ. "ಪಾಪ ! ಅದೇ ಜನ. ನಮ್ಮದೇ ಆದರ್ಶದ ಬದುಕು. ಪಾಪ ! ಅವರೇಕೆ ಆ ಫ್ರಾಕ್ ಕೊಳ್ಳಲಿಲ್ಲ ? ಹಣ ಇರಲಿಲ್ಲವೋ, ಏನೋ...."

ಸಂತೋಷದ ಬದುಕು, ಅವರಿಗಿರಬಹುದು. ಆದರೆ ಹೇಗೆ ಬದುಕುತ್ತಿದ್ದಾರೆಂಬುದೇ ಅವಳಿಗೆ ದುಃಖ ತಂದ ಸಂಗತಿಯಾಗಿತ್ತು. ಇಲ್ಲವಾದರೆ ಫ್ರಾಕ್ ಕೊಳ್ಳುತ್ತಿರಲಿಲ್ಲವೆ ? ಅದನ್ನು ಮಗುವಿಗೆ ಕೊಳ್ಳಲಿಲ್ಲ ಎಂಬ ದುಃಖ ಆಕೆಗಿರಬಹುದು. ಬದುಕಿನಲ್ಲಿ ಅದು ಮುಖ್ಯ ಅಲ್ಲದಿರಬಹುದು. ಆದರೆ ಇಂಥ ವಿಷಯ ತಾಯಿಯ ಧೃತಿಗೆಡಿಸುತ್ತದೆ ಎಂಬುದಂತೂ ನಿಜ. ಆ ಫ್ರಾಕ್ ಹಾಕಿದರೆ ಪಾಪು ಹೇಗೆ ಕಾಣಿಸುತ್ತಾಳೆ ಎಂದು ಶ್ರೀಮತಿ ಎಫ್ ತನ್ನ ಗಂಡನಿಗೆ ಈಗ ಹೇಳುತ್ತಿರಬಹುದೆ ?

ಎಫ್ ದಂಪತಿ ತುಂಬಾ ಸುಖಿಗಳು. ಅವಳದು ಎಷ್ಟು ಸಂತೋಷದ ಬದುಕು ! ಅವರಿಗೇ ಗೊತ್ತಿಲ್ಲವೇನೊ, ಅವರನ್ನು ನಾನು ಮೆಚ್ಚಿಕೊಳ್ಳದೇ ಇರಲಾದೀತೆ ? ನಾನು ಹೇಗಿರಬೇಕೆಂದುಕೊಂಡಿದ್ದೇನೋ ಅದರ ಪ್ರತಿರೂಪ ಅವರದು....ಆ ಫ್ರಾಕನ್ನು ನಾನು ಕೊಂಡು ಕೊಡುವೆ....ಅವಳ ಸಂತೋಷ ಕಂಡು ಖುಷಿಪಡುವೆ....

ಈ ಆಲೋಚನೆಯೇ ಅವಳಿಗೆ ಖುಷಿಕೊಟ್ಟಿತು.

ತಕ್ಷಣ ಎದ್ದಳು, ಪರ್ಸ್ ಹಿಡಿದು ಹೊರಗೋಡಿದಳು. ಸಮಯ ನೋಡಿಕೊಂಡಾಗ ರಾತ್ರಿ 9.15. ಅದೇ ಸರಿ ಎಂದುಕೊಂಡಳು. ಮಾರವಾಡಿ ಅಂಗಡಿಗೆ ಹೋದಳು. ಐದು ಡಾಲರ್ ಸಿಕ್ಕಿತು. ಅಂಗಡಿಯತ್ತ ಓಡಿದಳು.

ಕೆಲ ಅಂಗಡಿಗಳು ಮುಚ್ಚಿದ್ದವು. ಅವಳಿಗೆ ಬೇಕಾದದ್ದು ತೆರೆದಿತ್ತು. 'ಏನು ಕೊಳ್ಳಬೇಕೆಂದು ತಿಳಿದಿದ್ದರಿಂದ ಕೂಡಲೇ ಅಲ್ಲಿಗೇ ಹೋದಳು. ತಿಳಿಕೆಂಪು ಫ್ರಾಕ್....6.20 ಡಾಲರ್.

ಕೋಣೆಗೆ ಮರಳಿ ಬಂದು ಫ್ರಾಕ್ ನೋಡಿದಳು. ತುಂಬಾ ಸುಂದರವಾಗಿತ್ತು. ಆ ಮಗುವಿಗೆ ಹೇಗೆ ಕಾಣಬಹುದೆಂದು ಕಲ್ಪಿಸಿಕೊಳ್ಳಲೆತ್ನಿಸಿದಳು. ಅದನ್ನು ಸರಿಯಾಗಿ ಮಡಚಿ ಒಂದು ಪುಟ್ಟ ಪತ್ರ ಬರೆದು ಅದರೊಂದಿಗೆ ಇಟ್ಟಳು. ತನ್ನ ಭಾವನೆ ಹೊರಬಾರದಂತೆ ಬರೆದಿದ್ದ ಪತ್ರವದು. ಸುಂದರವಾದ ಪಾರ್ಸಲ್ ಸಿದ್ಧವಾಯ್ತು, ಏನೋ ತೃಪ್ತಿಯಾದಂತಾಯಿತು.

ಏಕೋ ಕಣ್ಣೀರು ಸುರಿಯಲಾರಂಭವಾಯಿತು. ಛೆ! ಏಕೆ ಹೀಗೆ ಎಂದು ಪ್ರಶ್ನಿಸಿಕೊಂಡಳು. ಹಿಂದಿನ, ಇಂದಿನ ಬದುಕನ್ನು ಹೋಲಿಸಿಕೊಂಡಳು. ಮಗುವಿಗೆ ಹಾಲಿನ ಪುಡಿ ಮುಗಿದು ಹೋಗಿದೆ....ಏಕಾಂಗಿಯಾಗಿ ವಾಸಿಸತೊಡಗಿದ ಮೇಲೆ ಇದೇ ಮೊದಲ ಬಾರಿಗೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಒಂದು ಕಡೆ ಫ್ರಾಕ್, ಮತ್ತೊಂದು ಕಡೆ ಹಾಲಿನ ಪುಡಿ ಅವಳ ಮುಂದೆ ಕುಣಿಯತೊಡಗಿತು. ತಲೆ ಮತ್ತು ಎದೆಯಲ್ಲಿ ನೋವು ಉಂಟಾಯಿತು. ಸಾಯುತ್ತಿದ್ದೇನೆ ಎಂಬ ಭಾವನೆ....ದುಃಖ ಉಮ್ಮಳಿಸಿ ಬಂತು....ಯಾವಾಗ ನಿದ್ದೆ ಬಂತೋ ತಿಳಿಯದು.

ಸೂರ್ಯಕಿರಣ ಜತೆಗೆ ಕೋಣೆಯ ದೀಪ ಕೂಡ ಉರಿಯುತ್ತಿತ್ತು. ಉರಿಯುತ್ತಿದ್ದ ಕಣ್ಣುಗಳನ್ನು ಉಜ್ಜತೊಡಗಿದಳು. ಅನಗತ್ಯ ಚಿತ್ರಗಳು ಸುಳಿಯಬಾರದು, ಬೆಳಗಿನ ಬರವಣಿಗೆಗೆ ಅಡ್ಡಿಯಾಗಬಾರದು ಎಂದು ಮತ್ತೆ ಕಣ್ಣು ಮುಚ್ಚಿದಳು....ಕಿಟಕಿ ಬಳಿ ಬಂದು ನಿಂತಳು. ಕೋಣೆ ಸುತ್ತಾ ಕಣ್ಣು ಹಾಯಿಸಿದಳು. ಸಣ್ಣ ಪಾರ್ಸಲ್ ಕಾಣಿಸಿತು. ಒಮ್ಮೆಲೆ ಕಿತ್ತು ತೆಗೆದಳು ತಿಳಿಕೆಂಪು ಬಣ್ಣದ ಫ್ರಾಕ್. ಕುಡುಕರಂತೆ ಹಿಂದಿನ ರಾತ್ರಿಯನ್ನು ನೆನಪು ಮಾಡಿಕೊಳ್ಳತೊಡಗಿದಳು. ಪತ್ರ ಹೊರತೆಗೆದಾಗ ಫ್ರಾಕ್ ಕೆಳಗೆ ಬಿದ್ದಿತು. ಪತ್ರವನ್ನು ಚೂರು ಚೂರು ಮಾಡಿದಳು. "ಎಂಥಾ ಹಾಸ್ಯಾಸ್ಪದ ಭಾವನೆಗಳು, ನಾನು ಇನ್ನೂ ಅಂಧಳಾಗಿರುವೆ. ಪ್ರಜ್ಞಾಶೂನ್ಯಳಾಗಿರುವೆ. ಬೇರೆ ಜನರ ಕಲ್ಪನೆಯಂತೆ ನಾನು ಬದುಕಬೇಕು. ದೃಢಳಾಗಬೇಕು ಧಿಟ್ಟ ಹೆಜ್ಜೆ ಇಡಬೇಕು....ಹೀಗೆಲ್ಲಾ ಹೋಗಬಾರದು....ಇದು ಬೆಲೆ ಇಲ್ಲದ ಬದುಕಾಗಿ ಬಿಡುತ್ತದೆ.... ಇಂಥ ಅಲ್ಪ ಸೂಕ್ಷ್ಮವಾದ ಭಾವನೆಗಳಿಗೆ ಬಲಿಯಾಗಬಾರದು...."

ಅವಳು ತನ್ನ ಮೇಜಿನ ಬಳಿ ಕುಳಿತಳು. ಈಗ ಮನಸ್ಸು ತಿಳಿಯಾಗಿತ್ತು. ಮಾನವೀಯ ಗುಣಗಳ ತುಲನೆ ಆರಂಭವಾಗಿತ್ತು. ಅದಕ್ಕೆ ಸಾಕ್ಷಿಯಾಗಿ ಬರವಣಿಗೆ ಓಡತೊಡಗಿತು....ಅವಳ ಮನದಂತೆ ಬರಹಕೂಡ ದೃಢವಾಗಿ ಚಲಿಸತೊಡಗಿತು.

ಕನ್ನಡಕ್ಕೆ : ದೇವಿ

ಹೊಸ ಸೇರ್ಪಡೆ

ಮತ್ತೆ ನನ್ನ ಆಕಾಶ : (ಕವನ ಸಂಗ್ರಹ) ಕೆ. ಪಿ. ನಟರಾಜ, ಗೌತಮ ಪ್ರಕಾಶನ, ತುಮಕೂರು, 1992 ಇದು ಲೇಖಕರ ಎರಡನೆಯ ಕವನ ಸಂಕಲನ 'ಪರಂಪರೆ ಮತ್ತು ಪ್ರಸ್ತುತಗಳನ್ನು ಎಚ್ಚರದಿಂದ ತಮ್ಮ ಕಾವ್ಯಕ್ಕೆ ದುಡಿಸಿಕೊಳ್ಳುವ ಶಕ್ತಿ ಹೊಂದಿರುವ ಈ ಕವಿ ತನ್ನ ವಾರಿಗೆಯ ಕವಿಗಳ ನಡುವೆ ಒಂದು ವಿಶಿಷ್ಟ ದನಿಯಾಗಿ ಬೆಳೆಯುವ ಭರವಸೆಯನ್ನು ಈ ಸಂಕಲನದಲ್ಲಿ ಹುಟ್ಟಿಸಿದ್ದಾರೆ.

ಜೀವ ಬಂತು ಹಾದಿಗೆ : (ಕವನ ಸಂಕಲನ) ಬಿ. ಪೀರ್ ಬಾಷ, ಸ್ವರಚಿತ ಕವನ ನಿವೇದನ ಬಳಗ, ಹೂವಿನ ಹಡಗಲಿ, 1993. ಲೇಖಕರ ಮೊದಲ ಕವನ ಸಂಕಲನವಾದ ಈ ಕೃತಿಯಲ್ಲಿ ಶೋಷಿತರ ಪರವಾದ ಸ್ಪಷ್ಟ ದನಿಯಿದೆ, ಬದುಕಿನ ಬಗ್ಗೆ ಅಪಾರ ಮಮತೆಯಿದೆ, ಜೀವನೋತ್ಸಾಹವಿದೆ. ಎಲ್ಲವನ್ನೂ ಮೀರಿ ಬೆಳೆಯುವ ಹುಮ್ಮಸ್ಸಿದೆ.

ನಮ್ಮ ಅಡಿಗೆ ಪಥ್ಯದ ಊಟ : ಡಾ॥ ಎಂ. ಶಿವರಾಮ್ ವಿಮಲಾ ಶೇಷಾದ್ರಿ, ಮೂರನೆಯ ಮುದ್ರಣ, ಮನೆಯಲ್ಲಿ ಬಳಕೆಯಲ್ಲಿರುವ ಅಳತೆಗಳನ್ನು ಕೊಟ್ಟು ಇಷ್ಟು ಪದಾರ್ಥಗಳನ್ನು ಹಾಕಿ ಮಾಡಿದರೆ ಇಂತಿಂತಹ ಅಂಶಗಳು ದೊರಕುತ್ತವೆ ಎಂಬ ವಿವರಗಳೊಂದಿಗೆ ಪಥ್ಯವಿರಿಸಲ್ಪಟ್ಟ ರೋಗಿಗೆ ಆಹಾರದ ಜ್ಞಾನವನ್ನು ಉಂಟುಮಾಡುವ ಉದ್ದೇಶ ಹೊತ್ತ ಕೃತಿಯಿದು.

ಈ ವರ್ತನೆಗಳು ನಿಮ್ಮಲ್ಲಿ ಎಷ್ಟಿವೆ? : ಡಾ॥ ಮೀನಗಂಡಿ ಸುಬ್ರಮಣ್ಯಂ, 'ಮನಸ್ಸು' ಇಲ್ಲದ ಮಾರ್ಗ ಕೃತಿಯಿಂದ ಓದುಗರಿಗೆ ಸುಪರಿಚಿತರಾದ ಈ ಲೇಖಕರು ತಮ್ಮ ಸರಳ ಶೈಲಿಯ ಮೂಲಕ ಇಂಟ್ರಾಪರ್ಸನಲ್ ಡಿಸ್ಟರ್ಬನ್ಸ್ ಕಾಯಿಲೆಯ ಲಕ್ಷಣ, ವಿವರಗಳನ್ನು ಸೋದಾಹರಣವಾಗಿ ಚಿತ್ರಿಸಿದ್ದಾರೆ.

ಹಿಂದುತ್ವದ ಹಿಂದೆ ಮುಂದೆ : ಡಾ॥ ಜಿ. ರಾಮಕೃಷ್ಣ, 'ಹಿಂದುತ್ವ'ವನ್ನು ತಮ್ಮ ಮೇಲೆ ಆರೋಪಿಸಿಕೊಂಡಿರುವವರ ಚರಿತ್ರೆಯನ್ನು, ಅವರ ಇಂದಿನ ಸ್ವರೂಪ ವಿಶ್ಲೇಷಣಗಳನ್ನು ಸೋದಾಹರಣವಾಗಿ ವಿವರಿಸುತ್ತಲೇ ಧಾರ್ಮಿಕ ಮೂಲಭೂತವಾದಿತನದ ಕಹಿ ಪರಿಣಾಮಗಳನ್ನು ಬಿಚ್ಚಿಡುವ ಕಿರುಹೊತ್ತಿಗೆ ಇದು.

ಮತಾಂಧತೆ ದೇಶ ಎತ್ತ ಸಾಗುತ್ತಿದೆ? : ಡಾ॥ ಕೆ. ಎಲ್. ಗೋಪಾಲಕೃಷ್ಣಯ್ಯ, ಸಮಕಾಲಿನ ವಿಚಾರ ವೇದಿಕೆಯಲ್ಲಿ ಮಂಡಿಸಿದ ಲೇಖನದ ವಿಸ್ತೃತ ರೂಪ ಇದು. ಈ ಕಿರುಹೊತ್ತಿಗೆಯಲ್ಲಿ, ಲೇಖಕರು, ಮತಾಂಧತೆಯ ಭೀಕರ ಸ್ವರೂಪವನ್ನು ವಿವರಿಸುತ್ತಾರೆ.

[ಈ ಮೇಲೆ ತಿಳಿಸಿದ ನಾಲ್ಕು ಪುಸ್ತಕಗಳ ಪ್ರಕಾಶಕರು ನವಕರ್ನಾಟಕ ಪ್ರಕಾಶನ ಪ್ರೈ ಲಿಮಿಟೆಡ್, ಬೆಂಗಳೂರು]

ಮನೋಮಿ : ಮಲಯಾಳಂ ಮೂಲ ಕಮಲಾ ದಾಸ್, ಕನ್ನಡಕ್ಕೆ : ಸಾರಾ ಅಬೂಬಕ್ಕರ್. ಜನಾಂಗೀಯ ಘರ್ಷಣೆಯ ಹುಚ್ಚು ಹೊಳೆಯಲ್ಲಿ ಮಾನವೀಯ ಸಂಬಂಧಗಳೆಲ್ಲವೂ ಹೇಗೆ ಕೊಚ್ಚಿ ಹೋಗುತ್ತವೆಂಬುದನ್ನು ಕಾದಂಬರಿಯ ರೂಪದಲ್ಲಿ ಕಮಲಾದಾಸ್ ಹೆಣೆದಿದ್ದಾರೆ. ಮಲೆಯಾಳಂನಲ್ಲಿರುವ ಈ ಕಾದಂಬರಿಯನ್ನು ಕನ್ನಡಕ್ಕೆ ಅಷ್ಟೇ ಸೊಗಸಾಗಿ ಅನುವಾದಿಸಿರುವ ಸಾರಾ ಅವರ ಈ ಕಾದಂಬರಿ ಈಗಾಗಲೇ 'ತರಂಗ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿದೆ.

ಬೆಳಕಿಗೊಂದು ಕಿರಣ ಮೇರಿಕ್ಯೂರಿ : ನೇಮಿಚಂದ್ರ, ಎರಡು ನೊಬೆಲ್ ಪ್ರಶಸ್ತಿ ಪಡೆದ ಮೊಟ್ಟಮೊದಲ ಜಗತ್ ಪ್ರಸಿದ್ಧ ವಿಜ್ಞಾನಿ, ಅದ್ಭುತ ಮಾನವತಾವಾದಿಯೂ ಆದ ಮೇರಿ ಕ್ಯೂರಿಯ ರಮ್ಯ ಕತೆಯನ್ನು ಕಾವ್ಯದ ಶೈಲಿಯಲ್ಲಿ ಇಲ್ಲಿ ಕಡೆದು ನಿಲ್ಲಿಸಲಾಗಿದೆ. ಈ ಕೃತಿ ಈಗಾಗಲೇ 'ಸುಧಾ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಮೂಡಿ ಬಂದಿದೆ.

ಬುಗುಡಿ : ಡಾ॥ ಕಮಲಾ ಹಂಪನಾ. ಕಮಲಾ ಹಂಪನಾರವರ ವಚನಗಳ ಸಂಗ್ರಹವಾದ "ಬಿಂದಲಿ" ಯಲ್ಲಿರುವ ವಚನಗಳ ಜೊತೆಗೆ ಆ ನಂತರ ಬರೆದ ಇನ್ನಷ್ಟು ಆಧುನಿಕ ವಚನಗಳನ್ನು ಸೇರಿಸಿ ಸಂಗ್ರಹಿಸಿರುವ ಈ ಕೃತಿ 'ಬುಗುಡಿ'. ಈ ವಚನಗಳ ಹೊರಮೈ ಹಳೆಯ ಧಾಟಿಯದಾದರೂ, ಒಳ ಹೂರಣವೆಲ್ಲ ಅರ್ವಾಚಿನ, ಸಮಕಾಲೀನ ಚಿಂತನೆಗಳದು.

[ಈ ಮೂರೂ ಕೃತಿಗಳ ಪ್ರಕಾಶಕರು ಕ್ರೈಸ್ಟ್ ಕಾಲೇಜು, ಕನ್ನಡ ಸಂಘ, ಬೆಂಗಳೂರು]

(23ನೇ ಪುಟ ನೋಡಿ)



ಮಹಿಳೆ ಮತ್ತು ಪತ್ರಿಕೋದ್ಯಮ

★ ವಿಚಾರಿ

ಪತ್ರಿಕೋದ್ಯಮಕ್ಕೆ ಮಹಿಳೆಯರ ಕೊಡುಗೆ- ಸುಶೀಲಾ ಕೊಪ್ಪರ, ಪತ್ರಿಕೋದ್ಯಮ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

ಪತ್ರಿಕೋದ್ಯಮದಲ್ಲಿಯ ಮಹಿಳೆಯರನ್ನು ಕುರಿತ ಇತಿಹಾಸ ಬರೆಯುವ ಉದ್ದೇಶದಿಂದ ಈ ಕೃತಿ ರಚನೆಯಲ್ಲಿ ತೊಡಗಿರುವ ಶ್ರೀಮತಿ ಸುಶೀಲಾ ಕೊಪ್ಪರವರು ಮಹಿಳಾ ಪತ್ರಿಕೋದ್ಯೋಗಿಗಳ ವಿವರಗಳನ್ನು ಒಟ್ಟಿಗೆ ಕಲೆಹಾಕುವ ಕೆಲಸವನ್ನು ಇಲ್ಲಿ ಮಾಡಿದ್ದಾರೆ.

ಪತ್ರಿಕೋದ್ಯಮ ಮತ್ತು ಮಹಿಳೆ ಎಂಬುದು ಪುಸ್ತಕದ ಆಶಯವಾದರೂ ಈ ಪುಸ್ತಕದಲ್ಲಿ ಅಗತ್ಯಕ್ಕಿಂತ ಸ್ವಲ್ಪ ಹೆಚ್ಚಿಗೇ ಮಹಿಳೆಯರನ್ನು ಕುರಿತ ಚಿಂತನೆ ನಡೆದಿದೆ. ಇಲ್ಲಿ ಇಡೀ ವಿಶ್ವದ ಮಹಿಳೆಯರನ್ನು ಕುರಿತು ಬರೆಯಲು ಹೊರಟಿರುವುದರಿಂದ ಒಟ್ಟಾರೆಯಾಗಿ ಪತ್ರಿಕೋದ್ಯಮವನ್ನು ಜಾಗತಿಕ ನೆಲೆಯಲ್ಲಿ ನೋಡುವ ಮಹತ್ವಾಕಾಂಕ್ಷೆ ಈ ಲೇಖಕರಿಗಿದೆ. ಇಡೀ ಪುಸ್ತಕವನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಂಡು 1. ಹೆಣ್ಣು-ಅಂದಿನಿಂದ ಇಂದಿನವರೆಗೆ 2. ಭಾರತದಲ್ಲಿ ಹೆಣ್ಣು 3. ಪತ್ರಿಕೋದ್ಯಮದಲ್ಲಿ ಪದಾರ್ಪಣೆ, ಎಂಬುದಾಗಿ ವಿಂಗಡಿಸಿಕೊಂಡಿದ್ದಾರೆ.

ಮೊದಲಿಗೆ ಹೆಣ್ಣು-ಅಂದಿನಿಂದ ಇಂದಿನವರೆಗೆ ಅಧ್ಯಾಯದಲ್ಲಿ ಚರಿತ್ರೆಯ ಕೆಲವೊಂದು ಘಟನೆಗಳನ್ನು ಉದಾಹರಿಸಿ ಮಹಿಳೆಯ ಹೀನಾಯ ಸ್ಥಿತಿಯನ್ನು ವಿವರಿಸುತ್ತಾರೆ. ಜೊತೆಗೆ, ಪುರುಷನ ಆಸ್ತಿಯಾಗಿ ಪರಿವರ್ತಿಸಲ್ಪಟ್ಟ ಹೆಣ್ಣಿನ ಸ್ಥಿತಿಯನ್ನು ಪತ್ರಿಕಾ ವರದಿಗಳೊಂದಿಗೇ ಹೆಚ್ಚು ಸ್ಪಷ್ಟಪಡಿಸುತ್ತಾರೆ.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಮಹಿಳೆಯರು ಹೇಗೆ ವಿಜ್ಞಾನ, ಸಾಹಿತ್ಯ, ಪರ್ವತಾರೋಹಣ ಹಾಗೂ ಸಾಹಸಚಟುವಟಿಕೆಗಳಲ್ಲಿ ಯಶಸ್ಸು ಸಾಧಿಸಿದ್ದಾರೆ ಎನ್ನುವುದನ್ನು ಉದಾಹರಿಸುತ್ತಲೇ ಅವಳು ರಾಜಕೀಯ ಮತ್ತು ಸಾರ್ವಜನಿಕ ಜೀವನದಲ್ಲಿ ಎದುರಿಸಬೇಕಾದ ಅಡೆತಡೆಗಳನ್ನು ವಿವರಿಸುತ್ತಾರೆ.

ತಮ್ಮ ಭಾವನೆ ಹಾಗೂ ವಿಚಾರಗಳನ್ನು ಪ್ರಚುರಪಡಿಸಲು ಕೆಲವು ಮಹಿಳೆಯರಿಗೆ ಅವಕಾಶ ಸಿಕ್ಕರೂ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಪುರುಷರ ನೆರಳಾಗಿ ಅಥವಾ ಎರಡನೆಯ ದರ್ಜೆಯ ನಾಗರೀಕಳಾಗಿಯೇ ಬದುಕಿದ್ದು ಆಯಾ ದೇಶಗಳಲ್ಲಿ ಮಹಿಳೆಯರು ತಮ್ಮ ಮತದಾನದ ಹಕ್ಕಿಗಾಗಿ ಹೋರಾಡಿದ್ದನ್ನು ಅಂಕಿ ಅಂಶಗಳೊಂದಿಗೆ ಸಿದ್ಧಪಡಿಸಿ ಹೇಳುತ್ತಾರೆ.

ಪಾಶ್ಚಿಮಾತ್ಯ ರಾಷ್ಟ್ರಗಳ ಹೆಣ್ಣಿನ ಸ್ಥಿತಿ-ಗತಿಯನ್ನು ಹೇಳುತ್ತಲೇ ಅರಬ್ ಪ್ರಪಂಚದ ಹೆಣ್ಣಿನ ಒಂದು ಚಿತ್ರಣವನ್ನು ಕೊಡುತ್ತಾರೆ. ಒಟ್ಟಾರೆಯಾಗಿ ವಿಶ್ವದ ಮಹಿಳೆಯ ವಿವಿಧ ಚಿತ್ರಗಳನ್ನು ಕೊಡುವ ಇವರ ಪ್ರಯತ್ನದಲ್ಲಿ ನಿರ್ದಿಷ್ಟ ಉದ್ದೇಶವು ಸಾಧಿಸದಿದ್ದರೂ ಹಲವಾರು ಸ್ವಾರಸ್ಯಕರ ಸಂಗತಿಗಳು ಓದುಗರಿಗೆ ದೊರೆಯುತ್ತವೆ.

ಎರಡನೆಯ ಅಧ್ಯಾಯದಲ್ಲಿ ಭಾರತೀಯ ಹೆಣ್ಣಿನ ಚಿತ್ರಣವನ್ನು ಕೊಡಲು ಜಾನಪದ ಸಾಹಿತ್ಯದ ಆಕರದಿಂದ ಹೊರಡುತ್ತಾರೆ. ಭಾರತೀಯ ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನಮಾನವನ್ನು ಹೇಳುತ್ತಲೇ ಕನ್ನಡದ ಪ್ರಾಚೀನ ಸಾಹಿತ್ಯದಲ್ಲಿ ಬರುವ ಲೇಖಕಿಯರ ಪಟ್ಟಿ ಮಾಡುತ್ತಾರೆ. ಹಾಗೂ ಭಾರತದಲ್ಲಿ ಹುಟ್ಟಿ ಬೆಳೆದ ಭಕ್ತಿಪಂಥದ ಭಕ್ತೆಯರನ್ನು ಅವರ ಕೊಡುಗೆಯನ್ನು ಗುರುತಿಸುತ್ತಾರೆ. ಅಷ್ಟೇ ಅಲ್ಲ, ದುಷ್ಟ ಆಚರಣೆಗಳಲ್ಲಿ ಸಿಲುಕಿ ನರಳಿದ ಹೆಣ್ಣು ಮಕ್ಕಳ ಸ್ಥಿತಿಗಳನ್ನು ಕುರಿತು ಬರೆಯುತ್ತಾರೆ.

ಸಮಾಜ ಸುಧಾರಕಿಯರಾದ ತಪಸ್ವಿನಿ, ಪಂಡಿತಾ ರಮಾಬಾಯಿ, ರಮಾಬಾಯಿ ರಾನಡೆ, ಶೋರ್ನಮಯಿ, ರಾಣಿ ಹರ್ನಾಮ ಸಿಂಗ್, ರಾಜಕುಮಾರಿ ಅಮೃತ ಕೌರ್, ಸಿಸ್ಟರ್ ನಿವೇದಿತಾ, ದುರ್ಗಾಬಾಯಿ ದೇಶಮುಖ್, ಮುತ್ತುಲಕ್ಷ್ಮಿ ರೆಡ್ಡಿ, ಸರೋಜಿನಿ ನಾಯಿಡು, ಕಸ್ತೂರಿ ಬಾ ಮುಂತಾದವರ ಸ್ವಾತಂತ್ರ್ಯ ಸಂಗ್ರಾಮದ ವೀರವನಿತೆಯರನ್ನು ಪರಿಚಯ ಮಾಡಿಕೊಡುತ್ತಾ ಇಂದಿರಾಗಾಂಧಿಯವರ ಕಾಲದ ಭಾರತದ ಮಹಿಳೆಯರ ಚಿತ್ರಣದವರೆಗೂ ಬರೆಯುತ್ತಾರೆ.

ಎಲ್ಲ ಕ್ಷೇತ್ರಗಳಲ್ಲಿ ಸಮಾನತೆ ಹಾಗೂ ಸಮಾನ ಅವಕಾಶಗಳ ಹಕ್ಕುಗಳಿಗಾಗಿ ಹೋರಾಡಿದಂತೆಯೇ ಪಶ್ಚಿಮದ ಮಹಿಳೆಯರಿಗೆ ಪತ್ರಿಕಾ ಪ್ರಪಂಚದಲ್ಲಿ ಪದಾರ್ಪಣೆ ಮಾಡಲು ಸಹ ಹಲವು ವರ್ಷಗಳು ಹಿಡಿದದ್ದನ್ನು ಗುರುತಿಸುವ ಸುಶೀಲಾ ಕೊಪ್ಪರ ಸಾರ್ವಜನಿಕ ಜೀವನದಲ್ಲಿ ಮಹತ್ವದ ಪಾತ್ರವಹಿಸಿದ ಮಹಿಳೆಯರ ಚಿತ್ರಗಳನ್ನು ಕೊಡುತ್ತಾ ಹೋಗುತ್ತಾರೆ. ಈ ರೀತಿಯ ಪಾತ್ರ ಚಿತ್ರಣಗಳು ಹಲವಾರು ಉತ್ತಮ ಮಾಹಿತಿಗಳನ್ನು ಕೊಡುತ್ತವಾದರೂ ಪತ್ರಿಕೋದ್ಯಮದ ಮಾಹಿತಿಯ ದೃಷ್ಟಿಯಿಂದ ಸ್ವಲ್ಪ ಕೊರತೆಯನ್ನುಂಟು ಮಾಡುತ್ತವೆ ಎನ್ನಬಹುದು.

ಈ ಅಧ್ಯಾಯದಲ್ಲಿ ಪತ್ರಿಕೋದ್ಯಮದಲ್ಲಿರುವ ಮಹಿಳೆಯರನ್ನು ಮೂರು ಹಂತದಲ್ಲಿ ಅವಲೋಕಿಸಲಾಗಿದೆ. ಪಶ್ಚಿಮ ದೇಶಗಳ ಪತ್ರಕರ್ತೆಯರನ್ನು (ವಿಶೇಷವಾಗಿ ಲಂಡನ್, ಅಮೆರಿಕಾ) ಅವರ ಸಾಹಸಗಳನ್ನು, ಜೀವನ ಚರಿತ್ರೆಯನ್ನು ಕೊಡುತ್ತಾರೆ. ಹಾಗೆಯೇ ಜರ್ಮನಿ, ಪಾಕಿಸ್ತಾನ, ರಷ್ಯಾ. ಆಸ್ಟ್ರೇಲಿಯಾ ದೇಶದ ಪತ್ರಕರ್ತರ ಕೆಲವು ಉದಾಹರಣೆಗಳನ್ನು ಕೊಡುತ್ತಾರೆ. ಈ ವಿವರಗಳ ಜೊತೆಯಲ್ಲಿ ಕೆಲವು ಅಪರೂಪದ ಪತ್ರಕರ್ತರನ್ನೂ ಪರಿಚಯಿಸುತ್ತಾರೆ. ಪೀತ ಪತ್ರಿಕೆಯನ್ನು ಆರಂಭಿಸಿದ ಅಮೆರಿಕದ ಪ್ರಥಮ ಮಹಿಳೆ ಆ್ಯನ್ ನ್ಯೂಪೋರ್ಟ್ ರಾಯಲ್ ಹೇಗೆ ತನ್ನ ವಿಚಿತ್ರ ಶೈಲಿಯಲ್ಲಿ ಪತ್ರಿಕೆಯನ್ನು ತರಲು ಯಶಸ್ವಿಯಾದಳು ಎಂಬುದನ್ನು ಹೇಳುತ್ತಾರೆ. ರಾಜಕೀಯ ವ್ಯಕ್ತಿಗಳ ಗುಟ್ಟು ರಟ್ಟು ಮಾಡುವ ಹಾಗೂ ಕಂಡು ಕೇಳಿದ ಹರಟೆಯನ್ನು ರುಚಿಯಾಗಿ ಬರೆಯುವುದು ಈಕೆಯ ಹೂರಣವಾಗಿತ್ತು.

"ನೆಲ್ಲಿ ಬ್ಲೈ" ಎಂಬ ಗಂಡಸಿನ ಹೆಸರಿನಲ್ಲಿ ಪತ್ರಿಕೆಗೆ ಬರೆಯಲು ಆರಂಭಿಸಿದ ಎಲಿಜಬೆತ್ ಸೀಮನ್ ಹುಚ್ಚಾಸ್ಪತ್ರೆಯ ಸ್ಥಿತಿಗತಿಗಳನ್ನು ವರದಿ ಮಾಡಲು ತಾನು ಹುಚ್ಚಾಸ್ಪತ್ರೆಗೆ ಸೇರಿದ ಸಾಹಸ ಮಾಡಿದ ಕಥೆಯನ್ನು ಲೇಖಕಿ ವಿವರವಾಗಿ ಬರೆಯುತ್ತಾರೆ. ಇಂತಹ ಸ್ವಾರಸ್ಯಕರ ಪ್ರಕರಣಗಳು ಕೃತಿಯನ್ನು ಓದಿಸಿಕೊಂಡು ಹೋಗುತ್ತದೆ.

ನಂತರ ಭಾರತದ ಪತ್ರಕರ್ತೆಯರ ಬಗ್ಗೆ ಬರೆಯುತ್ತಾ ಮುಖ್ಯವಾಗಿ ಬಂಗಾಲದಲ್ಲಿ ಆರಂಭಗೊಂಡ ಮಹಿಳಾ ಪತ್ರಿಕೋದ್ಯಮವನ್ನು ಕುರಿತು ಬರೆಯುತ್ತಾರೆ. ಭಾಮಾ ಬಾಧಿನಿ, ಅಂತಃಪುರ, ಭಾರತಿ, ಸುಪ್ರಭಾತ, ಭಾರತ ಭಗಿನಿ, ಮದನ್ ತಲ್ವಾರ್– ಪತ್ರಿಕೆಗಳನ್ನು ಅವುಗಳ ಸ್ವರೂಪವನ್ನು ಕುರಿತು ಬರೆಯುತ್ತಾರೆ. ಶ್ರೀಮತಿ ಆ್ಯನಿಬೆಸೆಂಟ್, ಕಮಲಾದೇವಿ ಚಟ್ಟೋಪಾಧ್ಯಾಯರವರು ಸ್ವಾತಂತ್ರ ಸಂಗ್ರಾಮ ಚಳುವಳಿಯ ಮೂಲಕ ಮಹಿಳೆಯರ ಜಾಗೃತಿಗೆ ದುಡಿದುದನ್ನು ಕುರಿತು ಬರೆಯುತ್ತಾರೆ.

ಸ್ವಾತಂತ್ರ್ಯಾನಂತರದ ಭಾರತೀಯ ಪತ್ರಿಕೆಗಳಲ್ಲಿ ಬರೆಯುತ್ತಿರುವ ಹಲವಾರು ಪ್ರಮುಖ ಪತ್ರಕರ್ತೆಯರನ್ನು ಪರಿಚಯಿಸುತ್ತಾ ಒಂದು ದೊಡ್ಡ ಪಟ್ಟಿಯನ್ನೇ ಕೊಡುತ್ತಾರೆ. ಗುಲ್ಸನ್ ಎವಿಂಗ್, ಪದ್ಮಿನಿ ಸೇನ್ ಗುಪ್ತಾ, ಅಜಿತ್ ಕೌರ್, ವಿಮಲಾ ಪಾಟೀಲ್, ರಾಮಿ ಛಾಬ್ರಾ, ಜಮಿಲಾ ಬ್ರಿಜ್‌ಭೂಷಣ, ಉಷಾ ವಾಸುದೇವ್, ಆಶಾಧರ್, ಮೇರಿ ಶಿರೀನ್ ರಾಧಾಬಾಯಿ ಮುಂತಾದ ಹಲವಾರು ವಿವಿಧ ಕ್ಷೇತ್ರಗಳಿಂದ ಬಂದ ಪತ್ರಕರ್ತೆಯರನ್ನು ಈ ಪುಸ್ತಕದಲ್ಲಿ ಪರಿಚಯಿಸುತ್ತಾರೆ.

ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷವಾಗಿ ಹಿಂದಿ, ಪಂಜಾಬಿ, ಬಂಗಾಲಿ, ಗುಜರಾತಿ, ಕೇರಳ, ಒರಿಸ್ಸಾ, ಆಂಧ್ರ, ಅಸ್ಸಾಂ, ತಮಿಳುನಾಡು–ಹೀಗೆ ವಿವಿಧ ರಾಜ್ಯದಲ್ಲಿ ಪತ್ರಕರ್ತೆಯರು ಸಾಧಿಸುವ ಸಾಧನೆಯನ್ನು ಗುರುತಿಸುತ್ತಾರೆ. ಒಟ್ಟಾರೆಯಾಗಿ ಭಾರತದ ಪತ್ರಕರ್ತೆಯರು ಸಂಪಾದಿಸಿರುವ ಪತ್ರಿಕೆಗಳ ವಿವರಗಳು ಮತ್ತು ಅವರು ಬರೆಯುವ ಪತ್ರಿಕೆಗಳ ವಿವರಗಳಿಗೆ ಈ ಕೃತಿ ದಾಖಲೆ ಒದಗಿಸುತ್ತದೆ.

ಕೊನೆಯದಾಗಿ ಕನ್ನಡ ಪತ್ರಿಕಾರಂಗದ ಚರಿತ್ರೆಯನ್ನು ಕುರಿತು ಬರೆಯುತ್ತಾ ವಿಶ್ವವಿದ್ಯಾನಿಲಯದ ಪದವಿ, ಪತ್ರಿಕೋದ್ಯಮದಲ್ಲಿ ತರಬೇತಿ, ವಿವಿಧ ಪತ್ರಿಕೆ

ಗಳಲ್ಲಿ ಕೆಲಸ ಮಾಡಿದ ಅನುಭವವಿಲ್ಲದೆ, ನೀರಿನಲ್ಲಿ ಬಿದ್ದ ನಂತರವೇ ಈಜು ಕಲಿತಂತೆ ಕನ್ನಡದ ಹಲವು ಮಹಿಳೆಯರು ಕನ್ನಡದ ಪತ್ರಿಕೋದ್ಯಮದಲ್ಲಿ ಪಳಗಿದ ಕತೆಯನ್ನು ಕುರಿತು ಬರೆಯುತ್ತಾರೆ. ಆರಂಭದ ಪತ್ರಕರ್ತೆಯರಾದ ನಂಜನಗೂಡಿನ ತಿರುಮಲಾಂಬ, ಬೆಂಗಳೂರಿನ ಆರ್. ಕಲ್ಯಾಣಮ್ಮ, ದ್ವಾರಕಾಬಾಯಿ, ಎಂ. ಆರ್. ಲಕ್ಷಮ್ಮ ಮುಂತಾದವರು ಹಾಕಿಕೊಟ್ಟ ಪತ್ರಿಕೋದ್ಯಮದ ಹಾದಿಯನ್ನು ವಿವರಿಸುತ್ತಲೇ ಪತ್ರಿಕೋದ್ಯಮದಲ್ಲಿ ತರಬೇತಿ ಹೊಂದಿದ, ಅದನ್ನು ವೃತ್ತಿಯನ್ನಾಗಿ ಆರಿಸಿಕೊಂಡ ಪತ್ರಕರ್ತೆಯರ, ಸಮೂಹ ಮಾಧ್ಯಮಗಳ ಸುದ್ದಿ ವರದಿಗಾರರ ವಿವರಗಳನ್ನೂ ಒದಗಿಸುತ್ತಾರೆ. ಕನ್ನಡದ ಪತ್ರಕರ್ತೆಯರ ವಿವರಗಳನ್ನು ಕೊಡುವಾಗ, ಸ್ವತಃ ಪತ್ರಕರ್ತೆಯಾದ ಲೇಖಕಿಯೂ ತನ್ನ ವೈಯಕ್ತಿಕ ಅನುಭವಗಳನ್ನೂ, ವಿವರಗಳನ್ನೂ ಆತ್ಮ ವೃತ್ತಾಂತದ ರೀತಿಯಲ್ಲಿ ವಿವರಿಸುತ್ತಾರೆ.

ಪತ್ರಿಕೋದ್ಯಮ ಮತ್ತು ಮಹಿಳೆಯನ್ನು ಕುರಿತಂತೆ ಕನ್ನಡದಲ್ಲಿ ಮಾಹಿತಿಯ ಅಭಾವವಿರುವಾಗ ಇಂತಹದೊಂದು ಪುಸ್ತಕ ನಿಜವಾಗಿ ಉತ್ತಮ ಆಕರವಾಗಿದೆ. ಆದರೆ ದಾಖಲೆಯಾಗಿರುವ ವಿವರಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಜೋಡಿಸಿ, ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದರೆ ಕೃತಿಯ ಉಪಯುಕ್ತತೆ ಇನ್ನೂ ಹೆಚ್ಚುತ್ತಿತ್ತು. ✦

(20ನೇ ಪುಟದಿಂದ)

ನಮ್ಮ ನಾಡು ಕರ್ನಾಟಕ ಡಾ॥ : ಎಚ್. ಎಸ್. ಗೋಪಾಲರಾವ್, ಕರ್ನಾಟಕದ ಎಲ್ಲ ಬಗೆಯ ಸಂಪತ್ತನ್ನೂ ಸಮಗ್ರ, ಆದರೆ ಅಧಿಕೃತ ಮಾಹಿತಿಯ ಮೂಲಕ ಸಂಕ್ಷಿಪ್ತವಾಗಿ ದಾಖಲಿಸುವ ಕರ್ನಾಟಕದ ಕೈಪಿಡಿಯಿದು.

ವೈದ್ಯಲೋಕದ ಕೌತುಕಗಳು : ಡಾ॥ ಎಚ್. ಡಿ. ಚಂದ್ರಪ್ಪಗೌಡ, ನುರಿತ ವೈದ್ಯರಾದ ಈ ಲೇಖಕರು ಹಲವಾರು ವೈದ್ಯಕೀಯ ಕೃತಿಗಳ ಲೇಖಕರು. ಈ ಪುಸ್ತಕದಲ್ಲಿ ವೈದ್ಯಲೋಕದ ಅನೇಕ ಕೌತುಕಗಳನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

[ಈ ಎರಡೂ ಪುಸ್ತಕಗಳ ಪ್ರಕಾಶಕರು
ನವಕರ್ನಾಟಕ ಪ್ರಕಾಶನ ಬೆಂಗಳೂರು]

ವಚನಗಳಲ್ಲಿ ಸತಿಪತಿ ಭಾವ : ಲೇಖಕಿ ಶೈಲಜಾ ಉಡಚಣ. ಪ್ರಕಾಶಕರು–ಗ್ರಿಸೋಬಲ್ಸ ಪ್ರಕಾಶನ, ಗುಲಬರ್ಗಾ, 1993, ಶರಣರು ತಮ್ಮ ಆಧ್ಯಾತ್ಮಿಕ ಸಾಧನೆಗೆ ಬಳಸಿಕೊಂಡ 'ಸತಿ ಪತಿ' ಭಾವದ ಭಕ್ತಿ ವಿಧಾನವನ್ನು ವೈದಿಕ ದ್ರಾವಿಡ ಪರಂಪರೆಗಳ ಬೆಳಕಿನಲ್ಲಿ ವಿವೇಚಿಸಿದ ನಾಲ್ಕು ಲೇಖನಗಳ ಸಂಕಲನ ಇದು.

ಖಂಡನೀಯ

1993ರ ಡಿಸೆಂಬರ್ 1, ಕೇಪ್‌ಟೌನ್‌ನಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ನೇತಾರ ಹಾಗೂ ಅದರ ಅಧ್ಯಕ್ಷ ನೆಲ್‌ಸನ್ ಮಂಡೇಲಾರವರಿಗೆ 'ವರ್ಷದ ನ್ಯೂಸ್ ಮೇಕರ್' ಪ್ರಶಸ್ತಿ ಪ್ರದಾನ ಮಾಡುವ ಸಮಾರಂಭ. ಈ ಪ್ರಶಸ್ತಿ ಪ್ರದಾನ ಮಾಡುವ ಸುವರ್ಣಾವಕಾಶ ಭಾರತದ ಬೆಳ್ಳಿತೆರೆಯ ಜನಪ್ರಿಯ ತಾರೆ ಶಬಾನಾ ಆಜ್ಮಿಯವರಿಗೆ ಒದಗಿಬಂದಿತ್ತು. ತಮ್ಮ ಪ್ರಗತಿಪರ ಚಿಂತನೆಗಳಿಗೆ ಹೆಸರಾದ ಶಬಾನಾ, ಈ ನ್ಯೂಸ್ ಮೇಕರ್ ಪ್ರಶಸ್ತಿ ಕೊಡುವ ಸಮಾರಂಭದಿಂದಾಗಿ ತಾವೇ ಸುದ್ದಿಗೆ ಗ್ರಾಸವಾದದ್ದು, ಅದೂ ಭಾರತೀಯ ಮನಸ್ಸಿನ ಒಂದು ಸಂಕುಚಿತ ವಲಯದ ಕ್ರೂರ ವಾಗ್ಬಾಣಗಳಿಗೆ ಗುರಿಯಾದದ್ದು ಮತ್ತೊಂದು ದುರಂತ.

ವಿಶ್ವಮಾನ್ಯ ಮಹಾನ್ ವ್ಯಕ್ತಿಯಾದ ನೆಲ್‌ಸನ್ ಮಂಡೇಲಾರವರಿಗೆ ಪ್ರಶಸ್ತಿ ನೀಡಿ, ನಂತರ ಆತ್ಮೀಯತೆಯ ಸ್ನೇಹದ ಕುರುಹಾಗಿ ಪ್ರೀತಿಯಿಂದ ಆ ಹಿರಿಯರ ಕೆನ್ನೆಗೆ ಮುತ್ತನಿತ್ತ ಶಬಾನಾ ಆಜ್ಮಿಯವರ ಚಿತ್ರ ತಿಂಗಳ ನಂತರ ಭಾರತದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ನಂತರ ಇದು ನೈತಿಕ ಜಿಜ್ಞಾಸೆಯ ವಿಷಯವಾದದ್ದು ಎಲ್ಲರಿಗೂ ತಿಳಿದ ವಿಷಯ. ಇಂತಹ ಸ್ನೇಹದ ಚರ್ಯೆಯನ್ನು ಅಶ್ಲೀಲ ಮನೋಭಾವದಿಂದ ನೋಡಿ ಇದನ್ನು ದೇಶವಿರೋಧಿ, ಇಸ್ಲಾಂ ವಿರೋಧಿ ಕೃತ್ಯವೆಂದು ಬೊಬ್ಬೆಯಿಡುತ್ತಿರುವ ಮತಾಂಧ ಶಕ್ತಿಗಳ ಮೂರ್ಖತನಕ್ಕೆ ತೀವ್ರ ಖಂಡನೆಯಿರಲಿ. ಶತಶತಮಾನಗಳಿಂದಲೂ ಬುರಖಾದಡಿಯಲ್ಲಿ ಧಾರ್ಮಿಕ ಸಂಕೋಲೆಗಳನ್ನು ತೊಡಿಸಿ ನರಳಿಸುತ್ತಿರುವ, ಭಾರತೀಯ ಹೆಣ್ಣಿನ ಸ್ಥಿತಿಯನ್ನು ಇನ್ನೂ ಹಾಗೆ ಮುಚ್ಚಿಡಬಯಸುವ, ಎಚ್ಚೆತ್ತ ಜಾಗೃತ ಮಹಿಳೆಯ ಸ್ವಾತಂತ್ರ್ಯಹರಣ ಮಾಡಲು ಸನ್ನದ್ಧರಾಗಿರುವ ಇಂತಹ ದುಷ್ಟ ಶಕ್ತಿಗಳ ವಿರುದ್ಧ ಎಲ್ಲರೂ ಎಚ್ಚರವಾಗಿರಬೇಕು.

ವಿಶ್ವದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ದೊರೆತ ವರ್ಷಗಳು

ಆಸ್ಟ್ರೇಲಿಯಾ 1902, ಆಸ್ಟ್ರಿಯಾ 1918, ಬೆಲ್ಜಿಯಂ 1919, ಬ್ರೆಜಿಲ್ 1932, ಬಲ್ಗೇರಿಯಾ 1947, ಕೆನಡಾ 1918, ಚೀನಾ 1947, ಡೆನ್ಮಾರ್ಕ್ 1915, ಫಿನ್ಲೆಂಡ್ 1906, ಫ್ರಾನ್ಸ್ 1944, ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ 1918, ಗ್ರೇಟ್ ಬ್ರಿಟನ್ 1919, ಹಾಲೆಂಡ್ 1919, ಭಾರತ 1926, ಇಂದಿನ ಭಾರತ ಹಾಗೂ ಪಾಕಿಸ್ಥಾನಗಳಲ್ಲಿ 1926ರಲ್ಲಿ ರಾಜ್ಯ ಚುನಾವಣೆಯಲ್ಲಿ ಭಾಗವಹಿಸುವುದಕ್ಕೆ ಮತಾಧಿಕಾರ ಸಿಕ್ಕಿದ್ದು, ಸ್ವಾತಂತ್ರ್ಯಾನಂತರ ನಡೆದ 1952–53ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸಂಪೂರ್ಣ ಮತಾಧಿಕಾರ ಸಿಕ್ಕಿತು.

ಇಂಡೊನೇಸಿಯಾಕ್ಕೆ 1955, ಇರಾನ್ 1963, ಐರ್ಲೆಂಡ್ 1919, ಇಸ್ರೇಲ್ 1948, ಇಟಲಿ 1945, ಜಪಾನ್ 1945, ಜೋರ್ಡಾನ್ 1973, ನ್ಯೂಜಿಲೆಂಡ್ 1893, ನಾರ್ವೆ 1913, ಫಿಲಿಪೀನ್ಸ್ 1937, ಪೋಲೆಂಡ್ 1918, ದಕ್ಷಿಣ ಆಫ್ರಿಕಾ 1930, ಸ್ಪೇನ್ 1931, ಸ್ವೀಡನ್ 1919, ಸ್ವಿಟ್ಜರ್ಲೆಂಡ್ 1971, ಥೈಲೆಂಡ್ 1932, ಟರ್ಕಿ 1933, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ 1920, ಯು.ಎಸ್.ಎಸ್.ಆರ್. 1917, ಜೆಕೋಸ್ಲೊವಾಕಿಯಾ 1945.

ಸಂಗ್ರಹ : **ಸುಶೀಲಾ ಕೊಪ್ಪರ ರವರ** “ಪತ್ರಿಕೋದ್ಯಮಕ್ಕೆ ಮಹಿಳೆಯರ ಕೊಡುಗೆ” ಕೃತಿಯಿಂದ

Reg No. MAG (5) PRC, DEGL 036/89/87
BOOK-POST/Periodicals

To

If undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-560 040